1. **Land :** 200 acres of land to be purchased U/s 109 of KLR Act at Sy.Nos. 282/1, 281 280/2B, 280/1+2A of Hotegali Village and Sy.No. 284 to 287 of Hankon Village, Karwar Taluk, Uttara Kannada Disrict and conversion of the same.
2. **Water :** The project proponent to submit separate proposal to WRD for allocation of 2 MLD of water from Kali river.
3. **Power :** 5 MW of power to be serviced by HESCOM.
4. **Incentive & Concessions** As per applicable Tourism Policy of the State.

GENERAL TERMS AND CONDITIONS :

1. **Environment :** The promoters as to obtain CFE from KPSCB Environmental clearance from MOEF, GOI / DFEE Gok as applicable.
2. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Government of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
3. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
4. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
5. **Others :**
   a) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   b) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka,
JYOTHI R.J.
Desk Officer (Technical Cell)
Commerce & Industries Department.

P.R. 210

COMMERCE AND INDUSTRIES SECRETARIAT

Sub : Approval to the Project Proposal of M/s. Ratna Cements (Yadwad) Ltd., to increase their plant capacity at Yadwad Village, Gokak Taluk, Belgaum District.

Read : Proceedings of the 26th State High Level Clearance Committee (SHLCC) Meeting held on 09-11-2011.

Preamble :

M/s. Ratna Cements (Yadwad) Ltd., has proposed unit for expansion of their plant capacity at Yadwad Village, Gokak Taluk, Belgaum District, from 0.15 MTPA to 1.00 MTPA with an investment of Rs. 495.24 Crores, generating employment to about 145 persons.

In the 26th State High Level Clearance Committee (SHLCC) Meeting held on 09-11-2011, the proposal of the Company was discussed and approved.

Government has examined the recommendations made by the 26th State High Level Clearance Committee Meeting held on 09-11-2011, in all aspects.

Hence the following order.

GOVERNMENT ORDER NO. CI 278 SPI 2011, BANGALORE, DATED 16-12-2011.

Government is pleased to accord in principle approval to the Project Proposal of M/s. Ratna Cerments (Yadwad) Ltd., to increase the Cement and Clinker Plant capacity from 0.15 MTPA to 1.0 MTPA in their plant at Yadwad Village, Gokak Taluk, Belgaum District with an investment of Rs. 495.24 Crores, generating employment to about 145 persons and extend the following infrastructure facilities, incentives and concessions.

INFRASTRUCTURE FACILITIES :

1. **Land :** 2000 acres of land for captive mines to source lime stone to be purchased U/s 109 of KLR Act at Yadwad Village, Gokak Taluk, Belgaum District and conversion of the same for industrial use.
2. **Water :** 5200 cubic meter per day of water from Ghataprabha River subject to availability. Project proponent to submit a separate application to WRD from Ghataprabha river.
3. **Power :** 15W to be serviced by HESCOM.
4. **Incentives and Concessions :** As per applicable Industrial Policy of the State.

GENERAL TERMS AND CONDITIONS :

1. **Environment :** The promoters as to obtain CFE from KPSCB Environmental clearance from MOEF, GOI / DFEE Gok as applicable.
2. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Government of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
3. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
4. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
5. **Others :**
   a) The project proponents shall provide employment to at least one member of the family of each land looser if the land is acquired through KIADB.
   b) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   c) The promoter shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka,

JYOTHI R.J.

Desk Officer (Technical Cell)

Commerce & Industries Department.

P.R. 211

COMMERCE AND INDUSTRIES SECRETARIAT

Sub : Approval to the Project Proposal of M/s. Wipro Ltd., to establish an unit for manufacture of "Hydraulic Cylinders" at Dobbaspet Indusrial area 4th Phase, Nelamangala Taluk, Bangalore Rural Disrict.

Read : Proceedings of the 26th State High Level Clearance Committee (SHLCC) Meeting held on 09-11-2011.

Preamble :

M/s. Wipro Ltd., has proposed to establish manufacture of "Hydraulic Cylinders" at Dobbaspet Indusrtial area, 4th Phase, Nelamangala Taluk, Bangalaore Rural District, with an investment of Rs. 100.00 Crores, generating employment to about 335 persons.

In the 26th State High Level Clearance Committee (SHLCC) Meeting held on 09-11-2011, the proposal of the Company was discussed and approved.

Government has examined the recommendations made by the 26th State High Level Clearance Committee Meeting held on 09-11-2011, in all aspects.

Hence the following order.

GOVERNMENT ORDER NO. CI 270 SPI 2011, BANGALORE, DATED 29-12-2011.

Government is pleased to accord in principle approval to the Project Proposal of M/s. Wipro Ltd., to establish an unit for manufacture of "Hydraulidc Cylinders" at Dobbaspet Industiral area, 4th Phase, Nelamangala Taluk, Bangalore Rural District, with an

investment of Rs. 100.00 Crores, generating employment to about 335 persons and extend the following infrastructure facilities, incentives and concessions.

INFRASTRUCTURE FACILITIES :

1. **Land :** 15 acres of land to be allotted by KIADB in 4th Phase, Dobbaspet Indistrial Area, Nelamangala Taluk, Bangalore Rural Disrtict. This would be subject to assessment of land by the Land Audit committee.
2. **Water :** The requirement of water to be supplied by KIADB.
3. **Power :** 1800 KVA to be serviced by BESCOM.
4. **Incentives & Concessions** As per applicable Industrial Policy of the State.

GENERAL TERMS AND CONDITIONS :

1. **Environment :** The promoters as to obtain CFE from KPSCB Environmental clearance from MOEF, GOI / DFEE Gok as applicable.
2. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Government of Karnataka. A copy of Human Resources Development plan shall be sent to the Commissioner for I.D. & Director of Industries and commerce for monitoring.
3. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
4. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
5. **Others :**
   c) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   d) The promoters shall take all statutory and other necessary clearances from the competent authorities including GOI and shall submit milestones/progress in implementation of the projects regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka,

SHIVASHANKAR NAIK. L.

Desk Officer (Technical Cell) (I/c)

Commerce & Industries Department.

P.R. 212

COMMERCE AND INDUSTRIES SECRETARIAT

Sub : Allotment of land to M/s Manipal Universal Learning Private Ltd. in 3rd Phase of KIADB Industrial Area, Doddaballapura Taluk, Bangalore Rural District.

Read : G.O. No. CI 181 SPI 2011 dated 29-08-2011.

Preamble :

The project proposal of M/s Manipal Universal Learning Private Ltd. to establish a "Global Corporate Training Campus" at KIADB Industrial Area, 3rd Phase Doddaballapur, Bangalore Rural District, with an investment of Rs. 470.00 Cr. Was approved in the 25th State High Level Clearance Committee meeting held on 14-07-2011, subject to the exact land requirement to be assessed by the Land Audit Committee. Accordingly,. G.O. read above is issued.

The project proponent requested for 60 acres of land.

Now, the Land Audit Committee in its 17th meeting held on 15-09-2011 has examined and recommended to allot the 55 acres of land to M/s Manipal Universal Learning Private Ltd.

Hence the following order.

GOVERNMENT ORDER NO. CI 181 SPI 2011, BANGALORE, DATED 12-12-2011.

Government is pleased to accord approval to allot 55 acres of land to M/s Manipal Universal Learning Private Ltd. In KIADB Industrial Area, 3rd Phase, Doddaballapur, Bangalore Rural District for establishment of a "Global Corporate Training Campus" as approved vide G.O. No. CI 181 SPI 2011 dated 29-08-2011.

The terms & conditions of G.O. read above is remain the same.

By Order and in the name of the Governor of Karnataka,

JYOTHI R.J.

Desk Officer (Technical Cell)

Commerce & Industries Department.

P.R. 213

COMMERCE AND INDUSTRIES SECRETARIAT

Sub : Sanction of special incentives and concessions for setting up of New Engine Plant and expansion of existing 100% EOU for manufacture of Automotive transmissions at M/s Toyota Kirloskar Auto Parts Pvt., Ltd., Plot No. 21 Bidadi Industrial Area, Bidadi Ramanagara District Reg.

Ref : 1) Proceedings of the 24th State High Level Clearance Committee (SHLCC) meeing held on 24-01-2011.

2) Government Order No. CI 46 SPI 2011 dated : 23-02-2011.

3) Corrigendum dated : 06-06-2011.

Preamble:

1. M/s Toyota Kirloskar Auto Parts Pvt., Ltd., (TKAP) was formed as a joint venture company among Toyota Motor Corporation, Japan, Toyota Industries Corporation, Japan and Kirloskar Systems Ltd., India with 64%, 26 % and 10 % shareholding respectively.

2. TKAP is located in plot No. 21, Bidadi Industrial Area, Ramanagara District, As on date, the total investment in Kirloskar Auto Parts Pvt., Ltd., is Rs. 529 cr. including the investment in its another manufacturing unit in Jigani.

3. M/s Toyota Kirloskar Auto Parts Pvt., Ltd., has now proposed to establish a new engine plant and for expansion of existing 100% EOU for automotive transmissions with an investment of Rs. 500 crores and submitted an application No. TKAP/HLC/GoK/2010 dated 5th July 2010 to SHLCC. The proposal was approved by the 24th State High Level Clearance Committee meeting held on 24-02-2011. Accordingly, Government Order No. CI 46 SPI 2011 dated : 23-02-2011 and further corrigendum dated 06-06-2011 was issued. The installed plant capacity of engines would be 108000 units per annum and the enhanced capacity for automotive transmissions would be 4,20,000 units per annum, including the additional 2,40,000 units appoved vide G.O. referred above.

4. As per the above Government Order, TKAP is eligible to avail incentives and concessions as per new industrial policy 2009-14. As the location of the plant- Bidadi in Ramanagar District falls under Zone-4, the unit cannot avail any incentives and concessions other than 100% EOU benefir and ETP subsidy as per the normal package.

5. M/s Toyota Kirloskar Auto Parts Pvt., Ltd., has made application on 22nd June 2011 to the Principal Secretary to Govt., C&I Department to consider their investment proposal at Bidadi for grant of special incentives and concessions as permitted under para 5.14.2 Annexure-2 of the New Industrial Policy 2009-14. In their application, M/s Toyota Kirloskar Auto Parts Pvt., Ltd., have requested for the following incentives and concessions.

- **a.** Stamp duty exemption and concessional registration charges.
- **b.** Entry Tax exemption.
- **c.** Interest free loan on VAT.
- **d.** Exemption from Works Contract tax-exemption period sought for the three years from 1st March 2011 to 28th February 2014 i.e., during construction

6. Considering the importance of ``Toyota” brand in the world over, the contribution that TMC has made Karnataka automobile sector and the proposed investment of Rs. 500 crore in the new engine plant and expansion of transmission assemblies which qualifies for the mega industries status, it is essential to consider the request of TKAP for special incentives and concessions as permitted under para 5.14.2 Annexure -2 of the New Industrial Policy 2009-14.

7. The proposal of M/s Toyota Kirloskar Auto Parts Pvt., Ltd., was brought before the Cabinet for its consideration. Hence the Order.

Government Order No. CI 46 SPI 2011, Bangalore, dated 19-12-2011

Government is pleased to accord sanction for the following package of special incentives and concession to M/s Toyota Kirloskar Auto Parts Pvt., Ltd., for the project of New Engine Plant and expansion of its Transmission Assembly Unit at Bidadi with an investment of Rs. 500 crore.

a. Stamp duty exemption and concessional registration charges:

Full exemption from stamp duty and concessional registration charges for registration of (i) lease-cum-sale deed and (ii) final sale deed for additional 17.29 acres of land being acquired through KIADB.

b. Entry tax exemption:

(i) During the project implementation: 100% exemption from payment of Entry Tax on plant and machinery and capital goods including machinery for captive generation for electricity, (DG sets), spares, tools, jigs, fixture, dies, utilities like boilers and compressors, cranes, material handing equipments, intermediates, semi-finished goods and sub-assemblies and such other equipments directly related to production processes (excluding petroleum products) and brought into local area for use in the manufacture of goods, for a period of 3 years from the date of commencement of project implementation (01-06-2011 to 31-05-2004). This incentive is available only for new engine plant and expanded production capacity of transmission assembly unit.

(ii) During Operation Phase: 100% exemption from payment of Entry Tax on input raw materials, components, packing materials and other consumables excluding petroleum products like petrol, HSD, HFO, Natural gas,

naptha and LSHS used as consumables or for captive power generation units for a period of 5 years from the date of commencement of commercial production (01-09-2012 to 31-08-2017). This incentive is available only for new engine plant and expanded production capacity of transmission assembly unit.

c) Exemption from Works Contract Tax: for three years from 1st March 2011 to 28th February 2014 i.e., during onstruction period by way of reimbursement from C & I Department budget.

By Order and in the name of the Governor of Karnataka
Jyothi. R.J.
Desk Officer (Technical Cell)
Commerce and Industries Department

P.R. 214

COMMERCE & INDUSTRIES SECRETARIAT

Sub : Ratification to earlier approved proposal of M/s Cargill India Pvt., Ltd., to establish a unit for manufacture of "Starch Liquid, Glucose, Malto-Dextrin, Dextrose Sorbitoal and 8.5 MW coal based captive power plant-reg.

Read : 1. Govt. Order. No. CI 177 SPI 2011 dated 18-08-2011.
2. Govt. Order No. CI 177 SPI 2011, dated : 17-09-2011.

Preamble:

The project proposal of M/s Cargill India Pvt., Ltd., to establish a unit for manufacture of "Starch Liquid, Glucose, Malto-Dextrin, Dextrose Sorbitoal and 8.5 MW coal based captive power plant." With an investment of Rs. 630 crores in 100 acres of land at KIADB Industrial Area, Shikaripura, Shimoga District was approved in the 25th SHLCC meeting held on 14-07-2011. Accordingly, G.O. was issued on 18-08-2011.

The company in its letter dtd. 26-07-2011 requested to consider their earlier request for setting up their project at Sy. Nos. 13, 196, 197 & 198 of Mogadu Village, Ranebennur Taluk, Haveri District thorugh acquisition and allotment of 100 acres of land by KIADB since it is suitable in terms of the logistics, availability of raw material and viability of the project.

Govt. in the C& I department considered the request for change of location from KIADB Industrial Area, Shiraripura, Shimoga District to Sy. Nos 13, 196, 197 & 198 of Mogadu Village, Ranebennur Taluk, Haveri District and Government Order 177 SPI 2011 dated 17-09-2011 was issued subject to ratification by SHLCC.

Hence the following order.

Government Order No. CI 177 SPI 2011 Bangalore, dated: 29-12-2011

Government is pleased to ratify the action taken vide G.O. CI 177 SPI 2011 dated 17-09-2011 for change of location from Shikraripura, Shimoga District to Sy. Nos 13, 196, 197 & 198 of Mogadu Village, Ranebennur Taluk, Haveri District.

The other terms & Conditions remain the same aas in the G.O. read above at (1)

This approval is valid for a period of two years from the date of issue.

By Order and in the name of the Governor of Karnataka
Shivashankar Naik. L
Desk Officer (Technical Cell) I/c
Commerce & Industries Department

P.R. 215

COMMERCE & INDUSTRIES SECRETARIAT

Sub : Amendment to earlier approved proposal of M/s Surya Vijayanagar Cement Ltd., to establish "5 Million TPA Cement Plant" – Withdrawal of the project.

Read : 1. Govt. Order. No. CI 139 SPI 2010, dated 29-04-2010.
2. Govt. Order No. CI 139 SPI 2010, dated : 14-05-2010.
3. Representation of the company, dated : 04-05-2010.

Preamble:

The SHLCC at its 21st meeting held on 29-03-2010 has approved the proposal of M/s Surya Vijaynagar Steels and Power Limited to establish " 5 Million TPA Cement Plant", with an investment of Rs. 2690 Crores in 500 acres of KIADB land at a suitable location identified by the Company in Bagalkot/Gulbarga District.

The approval for change of name from M/s Surya Vijaynagar Steels and Power Limited, to M/s Surya Viyaynagar Cement Limited, has approved vide G.O. No. CI 139 SPI 2010, Bangalore dated 14/05/2010.

The Chairman and Managing Director informed in his letter dated 29.06.2011 about withdrawal of Cement project of 5 Million MTPA capacity in Bagalkot/Gulbarga District.

The Chairman and Managing Director, of the company has requested for refund of Rs. 3.30 crores deposited towards the land cost to KIDBA for Cement Plant without any deduction as administration charges.

Hence the following order.

Government Order No. CI 139 SPI 2010, Bangalore, dated 29-12 -2011

Government is pleased to consider the request of the project proponent for withdrwal of the Project for setting up of Cement Plant in Bagalkot/Gulbarga District.

By Order and in the name of the Governor of Karnataka
Shivashankar Naik. L
Desk Officer (Technical Cell)(I/c)
Commerce & Industries Department

P.R. 216

COMMERCE & INDUSTRIES SECRETARIAT

-: ADDENDUM:-

No. CI 257/SPI/2011, Dated 30-12-2011

Sub : Approval to the project Proposal of M/s IMTMA to establish a "Centre of Excellence for Conducting Industrial and Trade Exhibition" project at Shettarahalli, Devanahalli Taluk, Banglore Rural District.

Read : 1) Govt. Order No. CI 257 SPI 2011, dated : 20-12-2011.

2) Proceedings of the 26th State High Level Clearance Committee (SHLCC) Meeting held on 09-11-2011.

Government is pleased to accord approval for sanction of incentives and concession as per applicable infrastructure Policy of the State for the project proposal of IMTMA approval vide G.O. read above at (1).

By Order and in the name of the Governor of Karnataka
Shivashankar Naik. L.
Desk Officer (Technical Cell I/c)
Commerce and Industries Department.

P.R. 217

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಶ್ರೀ ಟಿ.ಕೆ. ರಾಣೋಜಿರಾವ್, ಜಂಟಿ ನಿರ್ದೇಶಕರು, ಜಿಕೈಕೇ, ಬಿಜಾಪುರ ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸುವ ಬಗ್ಗೆ.

ಓದಲಾಗಿದೆ : 1. ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರದ ಸಂಖ್ಯೆ: ಕೈವಾಇ/ನಿರೀಕ್ಷಣೆ–2/83/2004–05, ದಿ: 14–10–2009.

2. ಸರ್ಕಾರದ ಕಾರಣ ಕೇಳುವ ನೋಟೀಸ್ ದಿ: 05–01–2010.

3. ಸರ್ಕಾರಿ ಆದೇಶ ಸಂಖ್ಯೆ: ವಾಕೈ 357 ಕೈಸೇವಿ 2008, ದಿ: 20–09–2010.

ಪ್ರಸ್ತಾವನೆ :

ಮೇಲೆ ಓದಲಾದ (1) ರ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು ಶ್ರೀ ಟಿ.ಕೆ. ರಾಣೋಜಿರಾವ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬಿಜಾಪುರ, ರವರು ಸಹಾಯ ಧನ ಬಿಡುಗಡೆ ಮಾಡುವ ಬಗ್ಗೆ ಕೈಗಾರಿಕೋದ್ಯಮಿಗಳಿಗೆ ಕಿರುಕುಳ ನೀಡುತ್ತಿರುವ ಸಂಬಂಧ ಕೈಗಾರಿಕೋದ್ಯಮಿಗಳು ಮನವಿಗಳನ್ನು ಸಲ್ಲಿಸಿ ಕ್ರಮ ಕೈಗೊಳ್ಳಲು ಕೋರಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ಮುಂದುವರೆದಂತೆ ಸರ್ಕಾರದ ಪತ್ರದ ಸಂಖ್ಯೆ: ವಾಕೈ 257 ಕೈಸೇವಿ 2008, ದಿನಾಂಕ: 08–12–2008ರಲ್ಲಿ ಶ್ರೀ ಟಿ.ಕೆ. ರಾಣೋಜಿರಾವ್, ಜಂಟಿ ನಿರ್ದೇಶಕರು, ಜಿಕೈಕೇ, ಬಿಜಾಪುರ ಇವರ ವಿರುದ್ಧ ಭ್ರಷ್ಟಚಾರ ಮತ್ತು ಅವ್ಯವಹಾರದ ಆಪಾದನೆಗಳ ಬಗ್ಗೆ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿತ್ತು.

ಈ ಹಿನ್ನೆಲೆಯಲ್ಲಿ ಅಪರ ನಿರ್ದೇಶಕರು, (ಜಿಲ್ಲಾ ಕೈಗಾರಿಕಾ ಕೇಂದ್ರ) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ರವರು ದಿ: 12–03–2009 ರಂದು ಅಧಿಕಾರಿಗಳ ಕಛೇರಿಗೆ ಭೇಟಿ ನೀಡಿ ವಿವಿಧ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಯನ್ನು ಮುಖ್ಯವಾಗಿ ಸಹಾಯಧನ ಮಂಜೂರಾತಿ ಬಗ್ಗೆ ಪರಿಶೀಲಿಸಿ ವರದಿಯನ್ನು ನೀಡಿರುತ್ತಾರೆ. ವರದಿಯ ಆಧಾರದ ಮೇಲೆ ಆಯುಕ್ತರು ಕೈಗಾರಿಕಾಭಿವೃದ್ಧಿ ಮತ್ತು ನಿರ್ದೇಶಕರು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ರವರು ಶ್ರೀ ಟಿ.ಕೆ. ರಾಣೋಜಿರಾವ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬಿಜಾಪುರ, ರವರಿಗೆ ಕಾರಣ ಕೇಳುವ ಸೂಚನಾ ಪತ್ರವನ್ನು ಜಾರಿ ಮಾಡಿ ಸಮಜಾಯಿಷಿಯನ್ನು ನೀಡಲು ಸೂಚಿಸಲಾಗಿತ್ತು: ಜಂಟಿ ನಿರ್ದೇಶಕರು ನೀಡಿರುವ ಸಮಾಜಾಯಿಷಿಯು ಸಮಂಜಸವಾಗಿ ಇಲ್ಲದೇ ಇರುವುದರಿಂದ ಸದರಿಯವರ ಮೇಲೆ ವಿಚಾರಣೆ ನಡೆಸಲು ತೀರ್ಮಾನಿಸಲಾಗಿದೆ. ಮೇಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸದರಿ ಅಧಿಕಾರಿಯವರ ಮೇಲೆ ವಿಚಾರಣೆ ನಡೆಸಲು ಅನುಬಂಧ–1 ರಿಂದ 4ರ ದೋಷಾರೋಪಣಾ ಪಟ್ಟಿಯನ್ನು ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರ ನೋಟೀಸ್‌ನಲ್ಲಿ ಶ್ರೀ ಟಿ.ಕೆ. ರಾಣೋಜಿರಾವ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬಿಜಾಪುರ, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ನಿರ್ಲಕ್ಷತನ ತೋರಿರುವುದು: ಸಹಾಯಧನ ಮಂಜೂರಾತಿ ಮತ್ತು ಬಿಡುಗಡೆ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಇರುವುದು; ಸರ್ಕಾರದ ಆದೇಶಗಳನ್ನು ಪಾಲಿಸದೇ ಕರ್ತವ್ಯ ಚ್ಯುತಿ ಎಸಗಿರುವುದು ಸರ್ಕಾರಿ ನೌಕರರಿಗೆ ಸಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು: ಕೆಲವೊಂದು ವಿಷಯಗಳಲ್ಲಿ ತಮ್ಮ ಹಂತದಲ್ಲಿಯೇ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿದ್ದರೂ ಸಹ ಅನಾವಶ್ಯಕವಾಗಿ ಕೇಂದ್ರ ಕಚೇರಿಗೆ ಪತ್ರ ವ್ಯವಹಾರ ಮಾಡಿ ವಿನಾಕಾರಣ ಗೊಂದಲ ಉಂಟು ಮಾಡಿರುವುದು ಕೈಗಾರಿಕೋದ್ಯಮಿಗಳಿಗೆ ಅನಾವಶ್ಯಕವಾಗಿ ತೊಂದರೆ ನೀಡಿ ಗೊಂದಲಕ್ಕೆ ಅನುವು ಮಾಡಿಕೊಟ್ಟಿರುವುದು; ಸಕಾಲದಲ್ಲಿ ಕಾರ್ಯನಿರ್ವಹಿಸಲು ವಿಫಲರಾಗಿರುವುದು; ಕೈಗಾರಿಕಾಭಿವೃದ್ಧಿಗೆ ಶ್ರಮಿಸದೇ ಇರುವುದು. ಮೇಲಾಧಿಕಾರಿಗಳ ಆದೇಶವನ್ನು ಪಾಲಿಸದೇ ಇರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ

ನಿಯಮ 11 ರಡಿ ಶಿಸ್ತು ಕ್ರಮ ಕೈಗೊಳ್ಳು ಆರೋಪಗಳಿಗೆ ಸಂಬಂಧಿಸಿದಂತೆ ದೋಷಾರೋಪಣಾ ಪಟ್ಟಿ ಅನುಬಂಧ 1 ರಿಂದ 4ನ್ನು ಕಳುಹಿಸಿ ಈ ನೋಟೀಸ್‌ಗೆ ಲಿಖಿತ ರೂಪದಲ್ಲಿ ಹೇಳಿಕೆ ಸಲ್ಲಿಸುವಂತೆ, ಸಲ್ಲಿಸದಿದ್ದರೆ ಆರೋಪಗಳ ಬಗ್ಗೆ ಸದರಿಯವರ ಪ್ರತಿವಾದವೇನು ಇಲ್ಲವೆಂದು ಭಾವಿಸಿ ಕರ್ನಾಟಕ ನಾಗರೀಕಾ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ಅನ್ವಯ ಸದರಿಯವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಲಾಗಿತ್ತು.

ಆದಾಗ್ಯೂ, ಸದರಿ ಅಧಿಕಾರಿಯವರು ಸಕಾರದ ಕಾರಣ ಕೇಳುವ ನೋಟೀಸ್‌ಗೆ ಇದುವರೆವಿಗೂ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಇದನ್ನು ಸರ್ಕಾರದಲ್ಲಿ ಗಂಭೀರವಾಗಿ ಪರಿಗಣಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: 3ರ ಆದೇಶದಲ್ಲಿ ಸದರಿ ಪ್ರಕರಣದಲ್ಲಿ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯಾಗಿ ಶ್ರೀ ಬಿ.ಎಂ. ಶ್ರೀಕಂಠಯ್ಯ, ನಿವೃತ್ತ ಜಿಲ್ಲಾ ನ್ಯಾಯಾಧೀಶರು. ನಂ. 239/1, ನಾಗಶ್ರೀ ನಿಲಯ, ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು, ಇವರನ್ನು ನೇಮಿಸಲಾಗಿತ್ತು. ಶ್ರೀಯುತರು ನಿಧನ ಹೊಂದಿರುವುದರಿಂದ ಇವರ ಬದಲಿಗೆ ಶ್ರೀ ಎಸ್.ಸಿ. ಇಂಗಳಗಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ. 403, 6 ಬಿ ಕ್ರಾಸ್, 18ನೇ ಮುಖ್ಯ ರಸ್ತೆ, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು 560 095 ಇವರನ್ನು ಈ ಪ್ರಕರಣದಲ್ಲಿ ವಿಚಾರಣಾಧಿಕಾರಿನ್ನಾಗಿ ನೇಮಿಸಲು ಉದ್ದೇಶಿಸಲಾಗಿದೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಾಕೈ 257 ಕೈಸೇವಿ 2008, ಬೆಂಗಳೂರು, ದಿನಾಂಕ : 16-12-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಟಿ.ಕೆ. ರಾಣೋಜಿರಾವ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬಿಜಾಪುರ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಒಬ್ಬ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಯಾಗಿದ್ದು, ಸರ್ಕಾರಿ ಕೆಲಸ ನಿರ್ವಹಿಸುವಾಗ ಕೆಲಸದಲ್ಲಿ ನಿರ್ಲಕ್ಷತನ ತೋರುತ್ತಿರುವುದು; ಸಹಾಯಧನ ಮಂಜೂರಾತಿ ಬಿಡುಗಡೆ ಬಗ್ಗೆ ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಇರುವುದು; ಸರ್ಕಾರದ ಆದೇಶಗಳನ್ನು ಪಾಲಿಸದೇ ಕರ್ತವ್ಯ ಚ್ಯುತಿ ಎಸಗಿರುವುದು; ಸರ್ಕಾರಿ ನೌಕರರಿಗೆ ಸಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು; ಕೆಲವೊಂದು ವಿಷಯಗಳನ್ನು ತನ್ನ ಹಂತದಲ್ಲಿಯೇ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿದ್ದರೂ ಸಹ ಅನಾವಶ್ಯಕವಾಗಿ ಕೇಂದ್ರ ಕಚೇರಿಗೆ ಪತ್ರ ವ್ಯವಹಾರಗಳನ್ನು ಮಾಡಿ ವಿನಾ ಕಾರಣ ಗೊಂದಲವನ್ನು ಉಂಟು ಮಾಡಿರುವುದು ಜಿಲ್ಲೆಯಲ್ಲಿ ಕೈಗಾರಿಕೋಧ್ಯಮಿಗಳಿಗೆ ಅನಾವಶ್ಯಕವಾಗಿ ತೊಂದರೆ ನೀಡಿ ಗೊಂದಲಕ್ಕೆ ಅನವು ಮಾಡಿ ಕೊಟ್ಟಿರುವುದು; ಸಕಾಲದಲ್ಲಿ ಕಾರ್ಯನಿರ್ವಹಿಸಲು ವಿಫಲರಾಗಿರುವುದು; ಕೈಗಾರಿಕಾಭಿವೃದ್ಧಿಗೆ ಶ್ರಮಿಸದೇ ಇರುವುದು; ಮೇಲಾಧಿಕಾರಿಗಳ ಆದೇಶಗಳನ್ನು ಪಾಲಿಸದೇ ಇರುವುದು ಕರ್ತವ್ಯ ಲೋಪ ಎಸಗಿರುವುದರಿಂದ ಕೆ.ಸಿ.ಎಸ್. (ಸಿ.ಸಿ.ಎ) ನಿಯಮಾವಳಿ 1957ರ ನಿಯಮ 11 ರಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಶ್ರೀ ಎಸ್.ಸಿ. ಇಂಗಳಗಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ. 403, 6 ಬಿ ಕ್ರಾಸ್, 18ನೇ ಮುಖ್ಯ ರಸ್ತೆ, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು 560 095 ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಶಿಸ್ತು ಪ್ರಾಧಿಕಾರದ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಯ ಮುಂದೆ ಮಂಡಿಸಲು ಶ್ರೀ ವಿ. ಲೋಕೇಶ್, ಉಪ ನಿರ್ದೇಶಕರು (ಆಡಳಿತ), ಕೇಂದ್ರ ಕಚೇರಿ, ಬೆಂಗಳೂರು, ಇವರನ್ನು ಅಥವ ಇವರ ಸ್ಥಾನದಲ್ಲಿ ವರ್ಗಾವಣೆಗೊಂಡು ಕರ್ತವ್ಯ ನಿರ್ವಹಿಸುವ ಅಧಿಕಾರಿಯನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿದೆ.

ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಕೈಗಾರಿಕಾಭಿವೃದ್ಧಿ ಆಯುಕ್ತರ ಕಛೇರಿಯಲ್ಲಿ ಅಥವಾ ಅವರು ಗುರುತಿಸಿ, ನಿಗಧಿಪಡಿಸಿರುವ ಸ್ಥಳದಲ್ಲಿ ನಡೆಸತಕ್ಕದ್ದು, ಈ ಉದ್ದೇಶಕ್ಕಾಗಿ ಲಭ್ಯವಿರುವ ಶೀಘ್ರಲಿಪಿಗಾರರು/ಬೆರಳಚ್ಚುಗಾರರ ಸೇವೆಯನ್ನು ಒದಗಿಸಲು ಮತ್ತು ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಒದಗಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿರ್ದೇಶನಾಲಯಕ್ಕೆ ಸೂಚಿಸಿದೆ.

ವಿಚಾರಣಾ ವರದಿಯನ್ನು 3 ತಿಂಗಳ ಅವಧಿಯೊಳಗೆ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಆದೇಶಿಸಿದೆ. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 6 ಸೇಇವಿ 2010, ದಿ: 28-04-2011 ರನ್ವಯ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯು ಸಂಭಾವನೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಲ್.ಎಸ್. ವಾಸನ್

ಸರ್ಕಾರದ ಅಧೀನ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

ಪಿ.ಆರ್. 218

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಮೆ: ಇಟ್ಕೋ ಡೆನಿಮ್ ಪ್ರೈ.ಲಿ. ಬಿಜಾಪುರ ಇವರಿಗೆ ವಿಶೇಷ ರಿಯಾಯಿತಿ/ಪ್ರೋತ್ಸಾಹಗಳನ್ನು ಸುವರ್ಣ ವಸ್ತ್ರ ನೀತಿಯಡಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :ದಿ: 06-07-2010 ರಂದು ಜರುಗಿದ ಸಭೆಯ ನಡವಳಿಗಳು.

ಪ್ರಸ್ತಾವನೆ :

ಜವಳಿ ಕ್ಷೇತ್ರದ ಕೈಗಾರಿಕೆಗಳು ಕಡಿಮೆ ಬಂಡವಾಳ ಹೂಡಿಕೆ ಮಾಡಿ, ಕಡಿಮೆ ವಿದ್ಯುತ್‌ನ್ನು ಉಪಯೋಗಿಸಿಕೊಂಡು ಅತಿ ಹೆಚ್ಚು ಸಂಖ್ಯೆಯ ಉದ್ಯೋಗಾವಕಾಶಗಳನ್ನು ಸೃಷ್ಠಿ ಮಾಡುತ್ತವೆ. ಜವಳಿ ಮತ್ತು ಸಿದ್ಧ ಉಡುಪುಗಳ ಉತ್ಪನ್ನಗಳ ರಫ್ತಿಗೆ ವಿಪುಲ ಅವಕಾಶ ಇರುತ್ತದೆ. ಈ ಕೈಗಾರಿಕೆಗಳಿಗೆ ಕಡಿಮೆ ನೈಪುಣತೆ ಬೇಕಾಗುತ್ತದೆ. ಈ ಕೈಗಾರಿಕೆಗಳನ್ನು ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಸ್ಥಾಪಿಸಲು ಹೇರಳ ಅವಕಾಶ ಇರುತ್ತದೆ. ಇವುಗಳನ್ನು ಗಮನದಲ್ಲಿಟ್ಟುಕೊಂಡು ಸುವರ್ಣ ವಸ್ತ್ರ ನೀತಿ 2008-13 ರಲ್ಲಿ ಅತಿ ಬೃಹತ್ (ಮೆಗಾ) ಜವಳಿ ಕೈಗಾರಿಕೆಗಳಿಗೆ ವಿಶೇಷ ಸವಲತ್ತುಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

2. ಮೆ: ETCO Denim Pvt. Ltd., ಇವರು ರಾಜ್ಯದ ಅತಿ ಹಿಂದುಳಿದ ಜಿಲ್ಲೆಯಾದ ಬಿಜಾಪುರದಲ್ಲಿ ರೂ. 316 ಕೋಟಿಗಳ ಬಂಡವಾಳ ಹೂಡಿ, 1073 ಜನರಿಗೆ ಉದ್ಯೋಗಾವಕಾಶ ಗಳನ್ನು ಸೃಷ್ಟಿಸುವವರಿದ್ದಾರೆ. ಸುವರ್ಣ ವಸ್ತ್ರ ನೀತಿ 2008-13ರ ಪ್ರಕಾರ ಇದು ಅತೀ ಬೃಹತ್ (ಮೆಗಾ) ಕೈಗಾರಿಕೆ ಆಗಿರುತ್ತದೆ. ಇವರು ಕೆಳಗಿನ ಸಹಾಯ ಸವಲತ್ತುಗಳನ್ನು ಕೋರಿರುತ್ತಾರೆ:

i. ಬಡ್ಡಿ ಸಹಾಯಧನ: ರೂ. 232 ಕೋಟಿಗಳ ಅವಧಿ ಸಾಲಕ್ಕೆ ಹಣಕಾಸು ಸಂಸ್ಥೆಯವರು ಶೇ. 4ಕ್ಕಿಂತ ಹೆಚ್ಚುವರಿ ಅಕರಿಸುವ ಬಡ್ಡಿಯನ್ನು ಮರುಪಾವತಿಸುವುದು:

ii. ಬಂಡವಾಳ ಸಹಾಯಧನ: ಘಟಕ ಸ್ಥಾಪಿಸಲು ನೀಡಿದ ಜಮೀನಿನ ಅಭಿವೃದ್ಧಿ ಹಾಗೂ ಇನ್ನಿತರ ಮೂಲ ಸೌಕರ್ಯವನ್ನು ನಿರ್ಮಾಣ ಮಾಡುವುದಕ್ಕಾಗಿ ಖರ್ಚು ಮಾಡಿದ ಬಂಡವಾಳದ ಮೇಲೆ ಶೇ. 10 ರಷ್ಟು ಬಂಡವಾಳ ಸಹಾಯಧನ ಮಂಜೂರು ಮಾಡುವುದು.

iii. ವಿದ್ಯುತ್ ಸಹಾಯಧನ ಮತ್ತು ವಿದ್ಯುತ್ ತೆರಿಗೆ ವಿನಾಯಿತಿ: ಘಟಕವು ಬಳಕೆ ಮಾಡಿದ ವಿದ್ಯುತ್‌ನ ಮೇಲೆ ಪ್ರತಿ ಯುನಿಟ್‌ಗೆ ರೂ. 1.00 ರಂತೆ ಸಹಾಯಧನ ನೀಡುವುದು. ಇದೇ ರೀತಿ ಘಟಕವು ಬಳಕೆ ಮಾಡುವ ವಿದ್ಯುತ್ ಮೇಲಿನ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ನೀಡುವುದು.

iv. ಇಎಸ್‌ಐ ಮತ್ತು ಇಪಿಎಫ್ ವಂತಿಗೆ ಮರುಪಾವತಿ: ಘಟಕದಲ್ಲಿರುವ ಉದ್ಯೋಗಿಗಳ ಇಎಸ್‌ಐ ಮತ್ತು ಇಪಿಎಫ್ ವಂತಿಗೆಯ ಶೇ. 75 ರಷ್ಟನ್ನು 15 ವರ್ಷಗಳವರೆಗೆ ಸರ್ಕಾರವು ಮರುಪಾವತಿಸಬೇಕು. ಮರುಪಾವತಿಸುವ ಹಣವನ್ನು ಪ್ರತಿ ವರ್ಷ ಶೇ. 5 ರಷ್ಟು ಕಡಿಮೆ ಮಾಡಬಹುದು.

v. ತ್ಯಾಜ್ಯ ಸಂಸ್ಕರಣ ಘಟಕದ ಸಹಾಯಧನ: ಶೇ 50ರಷ್ಟು ಬಂಡವಾಳ ಹೂಡಿಕೆಯ ಸಹಾಯಧನ.

vi. ಅಂಕರ್ ಯೂನಿಟ್ ಸಹಾಯಧನ.

vii. ಮೌಲ್ಯವರ್ಧಿತ ತೆರಿಗೆ ಮೇಲೆ ಬಡ್ಡಿರಹಿತ ಸಹಾಯಧನ.

viii. ಪ್ರವೇಶ ತೆರಿಗೆ ವಿನಾಯಿತಿ.

ix. ಮುದ್ರಾಂಕ ಶುಲ್ಕ ವಿನಾಯಿತಿ.

3. ಈ ಹಿನ್ನೆಲೆಯಲ್ಲಿ, ಸುವರ್ಣ ವಸ್ತ್ರ ನೀತಿಯಡಿ ಮೆ: ಇಟ್ಕೋ ಡೆನಿಮ್ ಪ್ರೈ. ಲಿ., ಬಿಜಾಪುರ ಈ ಕಂಪನಿಗೆ ಪ್ರೋತ್ಸಾಹ/ಉತ್ತೇಜನವನ್ನು ನೀಡಲು ಸರ್ಕಾರವು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಾಕೈ 26 ಜಕೈಯೋ 2010, ಬೆಂಗಳೂರು, ದಿನಾಂಕ : 20–12–2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸುವರ್ಣ ವಸ್ತ್ರ ನೀತಿಯಡಿ ಮೆ: ಇಟ್ಕೋ ಡೆನಿಮ್ ಪ್ರೈ. ಲಿ., ಬಿಜಾಪುರ ಈ ಕಂಪನಿಗೆ ಈ ಕೆಳಕಂಡಂತೆ ಪ್ರೋತ್ಸಾಹ/ಉತ್ತೇಜನವನ್ನು ನೀಡಲು ಸರ್ಕಾರವು ಅನುಮೋದನೆ ನೀಡಿದೆ.

1. ಈ ಯೋಜನೆಯನ್ನು ಜವಳಿ ಪಾರ್ಕ್ ಎಂದು ಪರಿಗಣಿಸಿ, ಸುವರ್ಣ ವಸ್ತ್ರ ನೀತಿ 2008–13ರ ಕಂಡಿಕೆ 10 (ಇ) ರನ್ವಯ ರೂ. 10 ಕೋಟಿಗೆ ಮಿತಿಗೊಳಿಸಿ, ಬಂಡವಾಳ ಪ್ರೋತ್ಸಾಹಧನ ನೀಡುವುದು.

2. ಸುವರ್ಣ ವಸ್ತ್ರ ನೀತಿಯ ಕಂಡಿಕೆ 10 (ಎಫ್) ರನ್ವಯ ವಿದ್ಯುತ್ ಸಹಾಯಧನವನ್ನು, ಉತ್ಪಾದನೆ ಪ್ರಾರಂಭವಾದ ಮೊದಲ 5 ವರ್ಷಗಳವರೆಗೆ ವಾರ್ಷಿಕ ರೂ. 2.00 ಕೋಟಿಗೆ ಮಿತಿಗೊಳಿಸಿ, ಪ್ರತಿ ಯೂನಿಟ್‌ಗೆ ರೂ. 1.00 ದರದಲ್ಲಿ ನೀಡುವುದು.

3. ಸುವರ್ಣ ವಸ್ತ್ರ ನೀತಿಯ ಕಂಡಿಕೆ 10(ಜಿ) ರನ್ವಯ ತ್ಯಾಜ್ಯ ವಿಲೇವಾರಿ ಘಟಕಕ್ಕೆ ರೂ. 5 ಕೋಟಿಗೆ ಮೀರದಂತೆ ಬಂಡವಾಳ ಪ್ರೋತ್ಸಾಹಧನ ನೀಡುವುದು.

4. ಸುವರ್ಣ ವಸ್ತ್ರ ನೀತಿಯ ಕಂಡಿಕೆ 10 (ಬಿ) ಹಾಗೂ 10 (ಸಿ)ರನ್ವಯ ಪ್ರವೇಶ ತೆರಿಗೆ ಮರುಪಾವತಿ ಹಾಗೂ ಮುದ್ರಾಂಕ ಶುಲ್ಕ ಮರುಪಾವತಿ.

5. ಉತ್ಪಾದನೆಯ ಮೊದಲ 5 ವರ್ಷಗಳ ಅವಧಿಗೆ ಶೇ. 75 ಇಎಸ್‌ಐ ಹಾಗೂ ಇಪಿಎಫ್ ಪಾವತಿಗಾಗಿ ವಾರ್ಷಿಕ ರೂ. 50 ಲಕ್ಷ ಮೀರದಂತೆ ಪ್ರೋತ್ಸಾಹಧನ ನೀಡುವುದು.

6. ಮೇಲ್ಕಂಡ ಪ್ರೋತ್ಸಾಹಕಗಳು ಒಟ್ಟು ರೂ. 457 ಕೋಟಿ ಬಂಡವಾಳ ಹೂಡಿಕೆ ಹಾಗೂ 4 ವರ್ಷಗಳಲ್ಲಿ 2000 ನೇರ ಉದ್ಯೋಗಾವಕಾಶಕ್ಕೆ ಒಳಪಟ್ಟಿರುತ್ತದೆ.

7. ಪ್ರೋತ್ಸಾಹವನ್ನು ಸುವರ್ಣ ವಸ್ತ್ರನೀತಿಯಡಿ ಆಯ್ಕೆ ಮಾಡಿಕೊಳ್ಳಲು (ಇದರಡಿಯಲ್ಲಿ ವ್ಯಾಟ್ ಸಾಲಕ್ಕೆ ಅವಕಾಶವಿರುವುದಿಲ್ಲ ಆದರೆ ಬಂಡವಾಳ ಪ್ರೋತ್ಸಾಹಧನ ಮತ್ತು ವಿದ್ಯುತ್ ಸಹಾಯಧನಕ್ಕೆ ಅವಕಾಶವಿರುತ್ತದೆ) ಅಥವಾ ಕೈಗಾರಿಕಾ ನೀತಿಯಡಿ ಆಯ್ಕೆ ಮಾಡಿಕೊಳ್ಳಲು (ಇದರಡಿ ವ್ಯಾಟ್ ಸಾಲಕ್ಕೆ ಅವಕಾಶವಿದೆ ಆದರೆ ಭಾರಿ ಕೈಗಾರಿಕೆಗಳಿಗೆ ಬಂಡವಾಳ ಪ್ರೋತ್ಸಾಹಧನ ಮತ್ತು ವಿದ್ಯುತ್ ಪ್ರೋತ್ಸಾಹಧನಕ್ಕೆ ಅವಕಾಶವಿರುವುದಿಲ್ಲ) ಕಂಪನಿಗೆ ಅವಕಾಶ ನೀಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: 733 ವೆಚ್ಚ–1/2011 ದಿ: 12–09–2011ರ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ದೇವೋಜಿ ರಾವ್

ಪೀಠಾಧಿಕಾರಿ (ಜವಳಿ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. 219

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಶ್ರೀ ಸಂಗಪ್ಪಾ @ ಸಂಗಮೇಶ ಗೌರವ್ವಾ ಕಾಂಬಳೆ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ ಇವರ ವಿರುದ್ಧ ದಾಖಲಾಗಿರುವ ಲಂಚ ಪ್ರಕರಣದಲ್ಲಿ ಪರಿಷ್ಕೃತ ಅಭಿಯೋಜನಾ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ:
1) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರದ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಎಲ್3/ಸಿಆರ್.2/2011/ಬಿಜಿಎಂ ದಿನಾಂಕ:23–8–2011.
2) ಪೊಲೀಸ್ ಇನ್ಸ್‌ಪೆಕ್ಟರ್ ಕರ್ನಾಟಕ ಲೋಕಾಯುಕ್ತ, ಬೆಳಗಾವಿ ರವರ ಪತ್ರ ಸಂಖ್ಯೆ/ಪಿಐ/ಕಲೋ/ಬೆಳಗಾವಿ/ಅಂತಿಮ ವರದಿ/ಪ್ರ.ಸಂ.02/11/2011/279,ದಿನಾಂಕ:01–08–2011.
3) ತನಿಖಾ ದಾಖಲೆಗಳ ನಕಲುಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ ಪ್ರಾಯೋಗಿಕ ಪಂಚನಾಮೆ, ಟ್ರ್ಯಾಪ್ ಪಂಚನಾಮೆ, ಜಪ್ತ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.
4) ಸರ್ಕಾರಿ ಆದೇಶ ಸಂಖ್ಯೆ:ವಾಕೈ 33 ಕೈಸೇವಿ 2011 ದಿನಾಂಕ:24–10–2011.
5) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರದ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಎಲ್–3/ಸಿಆರ್–2/2011/ಬಿಜಿಎಂ, ದಿನಾಂಕ:11–11–2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಪತ್ರದಲ್ಲಿ ಕೋರಿರುವಂತೆ ಉಲ್ಲೇಖ (4)ರ ಸರ್ಕಾರಿ ಆದೇಶವನ್ನು ಹೊರಡಿಸಲಾಗಿತ್ತು. ಆದರೆ, ಸದರಿ ಆದೇಶದಲ್ಲಿ ಕೆಲವು ನ್ಯೂನತೆಗಳು ಇರುವುದರಿಂದ ಹೊಸದಾಗಿ ಪರಿಷ್ಕೃತ ಅಭಿಯೋಜನಾ ಮಂಜೂರಾತಿ ಆದೇಶವನ್ನು ಹೊರಡಿಸುವಂತೆ ಉಲ್ಲೇಖ (5)ರ ಪತ್ರದಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರು ಕೋರಿರುತ್ತಾರೆ. ಅದರಂತೆ ಉಲ್ಲೇಖ (4)ರ ಸರ್ಕಾರಿ ಆದೇಶವನ್ನು ಮಾರ್ಪಡಿಸಿ ಈ ಕೆಳಕಂಡಂತೆ ಪರಿಷ್ಕೃತ ಆದೇಶವನ್ನು ಹೊರಡಿಸಿದೆ.

ಶ್ರೀ ಸಂಗಪ್ಪಾ @ ಸಂಗಮೇಶ ಗೌರವ್ವಾ ಕಾಂಬಳೆ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ, ಇವರ ವಿರುದ್ಧ ದಾಖಲಾಗಿರುವ ಮೊಕದ್ದಮೆ ಸಂಖ್ಯೆ:2/2011ರ ಸಂಬಂಧವಾಗಿ ತನಿಖಾ ಅಧಿಕಾರಿಯಾದ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಳಗಾವಿ, ಇವರು ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಸಲ್ಲಿಸಿಕೊಂಡಿರುವ ಅಂತಿಮ ತನಿಖಾ ವರದಿಯ ಪ್ರಕಾರ ಆಪಾದಿತ ಅಧಿಕಾರಿಯವರ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13 (1) ಡಿ ಸಹವಾಚನಾ 13(2)ರ ಅಡಿಯಲ್ಲಿ ಮಾಡಲಾದ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿದ್ದು, ಸದರಿ ಆಪಾದಿತ ಸರ್ಕಾರಿ ಅಧಿಕಾರಿಯವರು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಲು ಅರ್ಹರಾಗಿರುತ್ತಾರೆ. ಅವರನ್ನು ಅಭಿಯೋಜನೆಗೆ ಒಳಪಡಿಸಲು ಸಕ್ಷಮ ಪ್ರಾಧಿಕಾರದ ಅರ್ಥಾತ್ ಸದರಿ ಆಪಾದಿತ ಸರ್ಕಾರಿ ಅಧಿಕಾರಿಯವರನ್ನು ತನ್ನ ಹುದ್ದೆಯಿಂದ ತೆಗೆದು ಹಾಕುವ ಅಧಿಕಾರವುಳ್ಳ ಪ್ರಾಧಿಕಾರದ ಪೂರ್ವಾನುಮತಿ ಅಗತ್ಯವಾಗಿದ್ದು, ಸದರಿ ಅಧಿಕಾರಿಯವರನ್ನು ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಉಲ್ಲೇಖ (1)ರ ಪತ್ರದಲ್ಲಿ ಸರ್ಕಾರದ ಮಂಜೂರಾತಿಯನ್ನು ನೀಡಲು ಕೋರಿರುತ್ತಾರೆ.

ಮೇಲ್ಕಂಡ ಪತ್ರದೊಡನೆ ತನಿಖಾ ವರದಿಯ ನೆರಳಚ್ಚು ಪ್ರತಿ, ಪ್ರಥಮ ವರ್ತಮಾನ ವರದಿಯ ಪ್ರತಿ, ಟ್ರ್ಯಾಪ್ ಪೂರ್ವದ ಮಹಜರ್, ಟ್ರ್ಯಾಪ್‌ನ ನಡವಳಿಗಳು, ರಾಸಾಯನಿಕ ತಜ್ಞರ ವರದಿ, ವಶಪಡಿಸಿಕೊಂಡ ದಾಖಲೆಗಳ ಪ್ರತಿ, ಕೃತ್ಯ ನಡೆದ ಸ್ಥಳದ ನಕ್ಷೆ, ದಾಖಲೆಗಳ ಪ್ರತಿಗಳು ಮತ್ತು ಸಾಕ್ಷ್ಯಗಳ ಹೇಳಿಕೆಗಳನ್ನು ಒದಗಿಸಿದ್ದು ಸಕ್ಷಮ ಪ್ರಾಧಿಕಾರವು ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಶ್ರೀ ಸತೀಶ್ ಕುಮಾರ್, ಶಂಕರ ಕುರಾಡೆ ಸಾ:ಮನೆ ನಂ. ಟಿ. 87, ಎ. 405, ಏರ್‌ಫೋರ್ಸ್ ಸ್ಟೇಷನ್ ಸಾಂಬ್ರಾ ತಾ:ಬೆಳಗಾವಿ ಇವರ ಫಿರ್ಯಾದು ದಿನಾಂಕ:7–1–2011.
2. ಪ್ರಥಮ ವರ್ತಮಾನ ವರದಿ, ಗುನ್ನೆ ನಂ. 2/2011 ದಿ:7–1–2011 ಕಲಂ 7, 13 (1) ಡಿ ಸಹ ಕಲಂ 13(2) ಪಿಸಿ ಆ್ಯಕ್ಟ್–1988.
3. ಮಾನ್ಯ ಜಿಲ್ಲಾ ಸತ್ರ ನ್ಯಾಯಾಲಯ, ಬೆಳಗಾವಿ ಇವರಿಗೆ ಸಲ್ಲಿಸಿದ ಸ್ವತ್ತಿನ ಪಟ್ಟಿ ಗುನ್ನೆ ನಂ.2/2011 ದಿ:7–1–2011.
4. ದಿ:7–1–2011 ರಂದು ಮಾಡಿದ ಪ್ರಾಯೋಗಿಕ ಪಂಚನಾಮಾ
5. ದಿ:7–1–2011ರಂದು ಮಾಡಿದ ಟ್ರಾಪ್ ಪಂಚನಾಮಾ
6. ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ:ಸಾ.ಆ.ಸಂ./ರಾ.ಪ.ಲೋಕ್/184/10–11, ದಿ:28–01–2011.
7. ಟ್ರ್ಯಾಪ್ ಪಂಚನಾಮೆ ಕಾಲಕ್ಕೆ ತೆಗೆದ ಕರಡು ನಕಾಶೆ
8. ಸಾಕ್ಷಿಗಳ ಹೇಳಿಕೆಗಳು (ಪಟ್ಟಿಯನ್ನು ಅಂತಿಮ ವರದಿಯಲ್ಲಿ ಸೇರಿಸಲಾಗಿದೆ)
9. ದಿ:7–1–2011ರಂದು ಆಪಾದಿತ ಅಧಿಕಾರಿ ನೀಡಿದ ಸಮಜಾಯಿಷಿ ಹೇಳಿಕೆ

ತನಿಖಾಧಿಕಾರಿಗಳಾದ ಶ್ರೀ ಆರ್.ಆರ್. ಅಂಬಡಗಟ್ಟಿ ಪೊಲೀಸ್ ಇನ್ಸ್‌ಪೆಕ್ಟರ್ ಕರ್ನಾಟಕ ಲೋಕಾಯುಕ್ತ, ಬೆಳಗಾವಿ, ಶ್ರೀ ಸಂಗಪ್ಪಾ @ ಸಂಗಮೇಶ @ ಗೌರವ್ವಾ ಕಾಂಬಳೆ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ, ರವರ ವಿರುದ್ಧ ಧಾರವಾಡ ಕರ್ನಾಟಕ ಲೋಕಾಯುಕ್ತ ಆರಕ್ಷಕ ಠಾಣೆ ಗುನ್ನೆ ನಂ. 02/2011ರಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13, (1) ಡಿ ಜೊತೆಯಲ್ಲಿ ಓದಲಾದ ಸಹ ಕಲಂ 13 (2)ರಡಿಯಲ್ಲಿ ಪ್ರಕರಣವನ್ನು ದಿನಾಂಕ 7–11–2011ರಂದು ದಾಖಲಿಸಿ ತನಿಖೆಯನ್ನು ಕೈಗೊಂಡಿರುತ್ತಾರೆ.

ಆರೋಪಿತ ಸರ್ಕಾರಿ ಅಧಿಕಾರಿಯಾದ ಶ್ರೀ ಸಂಗಪ್ಪಾ ಸಂಗಮೇಶ ಗೌರವ್ವಾ ಕಾಂಬಳೆ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ, ರವರು ಪ್ರಕರಣದ ಫಿರ್ಯಾದಿಯಾದ ಶ್ರೀ ಸತೀಶ್‌ಕುಮಾರ್, ಶಂಕರ ಕುರಾಡೆ ಇವರು ಸ್ಥಾಪಿಸಲು ಉದ್ದೇಶಿಸಿರುವ ಮೆ:ಪ್ರೇಮ್ಸ್ ಡೈರಿ ಸಣ್ಣ ಪ್ರಮಾಣದ ಕೈಗಾರಿಕಾ ಉದ್ದಿಮೆಗೆ ತಾತ್ಕಾಲಿಕ ನೋಂದಣಿ ದೃಢೀಕರಣವನ್ನು ನೀಡಲು ರೂ.1,300–00 (ರೂಪಾಯಿ ಒಂದು ಸಾವಿರದ ಮುನ್ನೂರು ಮಾತ್ರ) ಲಂಚದ ಹಣವನ್ನು ಕೊಡುವಂತೆ ಒತ್ತಾಯಿಸಿದ್ದು, ತಮಗೆ ಲಂಚ ಕೊಡಲು ಇಷ್ಟವಿಲ್ಲದ ಕಾರಣ ಸದರಿ ಆಪಾದಿತರ ಮೇಲೆ ಸೂಕ್ತ ಕಾನೂನು

ಕ್ರಮ ಜರುಗಿಸುವಂತೆ ಕೋರಿ ದೂರು ನೀಡಿರುವ ಮೇರೆಗೆ ಸದರಿ ದೂರಿನಂತೆ ದಿನಾಂಕ 7–1–2011ರಂದು ತನಿಖಾಧಿಕಾರಿಗಳು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯ ಪೂರ್ಣ ಕಾರ್ಯಕ್ರಮಗಳನ್ನು ನೇರವೇರಿಸಿದ ನಂತರ ಅಧಿಕಾರಿಯವರು ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ ಕಛೇರಿ ಮೇಲೆ ಬಲೆ ಬೀಸಿರುತ್ತಾರೆ. ಫಿರ್ಯಾದುದಾರರು ಮತ್ತು ನೆರಳು ಸಾಕ್ಷಿದಾರರು ಕಛೇರಿಗೆ ಕಡೆಗೆ ಹೋದಾಗ ಆಪಾದಿತರು ಕೊಠಡಿಯ ಹೊರಗಡೆ ನಿಂತಿದ್ದು, ಫಿರ್ಯಾದುದಾರರಿಗೆ ನಮಸ್ಕರಿಸಿ ಆಪಾದಿತರು ತಿಳಿಸಿದ ಮೇರೆಗೆ ಫಿರ್ಯಾದುದಾರರು ಹಾಗೂ ನೆರಳು ಸಾಕ್ಷಿದಾರರು ಆಪಾದಿತರ ಕೊಠಡಿಯೊಳಗೆ ಕುಳಿತುಕೊಂಡು, ಆಪಾದಿತರು ಕೊಠಡಿಯೊಳಗೆ ತಮ್ಮ ಆಸನದಲ್ಲಿ ಕುಳಿತ ಬಳಿಕ ಫಿರ್ಯಾದುದಾರರು ತಮ್ಮ ಬಾಕಿ ಕೆಲಸದ ಬಗ್ಗೆ ವಿಚಾರ ಮಾಡಿ, ಆಗ ಆಪಾದಿತರು ಕಡತವನ್ನು ತೆಗೆದುಕೊಂಡು ಫಿರ್ಯಾದುದಾರರಿಗೆ ಸರ್ಟಿಫಿಕೆಟ್‌ನ್ನು ನೀಡಿ ರೂ.1300/–ಗಳ ಲಂಚದ ಹಣಕ್ಕೆ ತಮ್ಮ ಕೈಯನ್ನು ಚಾಚಿ, ಆಗ ಫಿರ್ಯಾದುದಾರರು ಲಂಚದ ಹಣವನ್ನು ಆಪಾದಿತರಿಗೆ ಕೊಟ್ಟಿರುತ್ತಾರೆ. ಆಪಾದಿತರು ಲಂಚದ ಹಣವನ್ನು ತಮ್ಮ ಬಲಗೈಯಿಂದ ಪಡೆದುಕೊಂಡು, ಎಣಿಕೆ ಮಾಡಿ ಶರ್ಟಿನ ಎಡ ಎದೆ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಈ ರೀತಿಯಾಗಿ ಆಪಾದಿತರು ಲೋಕಾಯುಕ್ತ ಪೊಲೀಸರು ಬೀಸಿದ ಬಲೆಗೆ ಲಂಚದ ಹಣ ಸಮೇತ ಸಿಕ್ಕಿ ಬಿದ್ದಿರುತ್ತಾರೆ.

ಆಪಾದಿತರ ಸ್ವಾಧೀನದಿಂದ ಲಂಚದ ಹಣ ರೂ.1,300/–ಗಳನ್ನು ವಶಪಡಿಸಿಕೊಂಡು ಆಪಾದಿತರ ಎರಡು ಕೈಗಳ ಬೆರಳುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ತನಿಖೆಗೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಂಡು ಆಪಾದಿತರನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಪ್ರಕರಣದ ತನಿಖೆಯನ್ನು ಮುಂದುವರೆಸಿರುತ್ತಾರೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚದ ನಿರೋಧ ಕಾಯ್ದೆ 1988ರ ಕಲಂ 7, 13 (1) ಡಿ ಸಹ ಕಲಂ 13 (2) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿರುವುದರಿಂದ, ಇವರನ್ನು ಲಂಚ ವಿರೋಧ ಕಾಯ್ದೆ 1988ರ ಕಲಂ 19(1)(ಬಿ) ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರವು ತೀರ್ಮಾನಿಸಿದೆ.

ಸಕ್ಷಮ ಪ್ರಾಧಿಕಾರದ ಸರ್ಕಾರವು ಆಪಾದಿತರನ್ನು ಕೆಲಸದಿಂದ ತೆಗೆದು ಹಾಕಲು ಅಧಿಕಾರವುಳ್ಳದ್ದಾಗಿದೆ. ಆದ್ದರಿಂದ ಲಂಚ ನಿರೋಧ ಕಾಯ್ದೆ 1989ರ 19(1)(ಬಿ)ರ ಅಡಿ ಆಪಾದಿತ ಅಧಿಕಾರಿಯಾದ ಶ್ರೀ ಸಂಗಪ್ಪಾ @ ಸಂಗಮೇಶ ಗೌರವ್ವಾ ಕಾಂಬಳೆ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ, (ಅಮಾನತ್ತು) ಇವರನ್ನು ಅಭಿಯೋಜನೆಗೆ ಒಳಪಡಿಸಲು ಸರ್ಕಾರವು ಈ ಕೆಳಕಂಡಂತೆ ಮಂಜೂರಾತಿ ಆದೇಶ ನೀಡಿದೆ.

ಸರ್ಕಾರದ ಆದೇಶ ಸಂಖ್ಯೆ : ವಾಕೈ 33 ಕೈಸೇವಿ 2011, ಬೆಂಗಳೂರು, ದಿನಾಂಕ: 19ನೇ ಡಿಸೆಂಬರ್ 2011.

ಶ್ರೀ ಸಂಗಪ್ಪಾ @ ಸಂಗಮೇಶ ಗೌರವ್ವಾ ಕಾಂಬಳೆ, ಸಹಾಯಕ ನಿರ್ದೇಶಕರು, (ಅಮಾನತ್ತು) ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ, ಇವರನ್ನು ಹುದ್ದೆಯಿಂದ ತೆಗೆದು ಹಾಕುವ (ವಜಾ ಮಾಡುವ) ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಸದರಿ ಅಧಿಕಾರಿಯವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7, 13(1)ಡಿ ಜೊತೆಯಲ್ಲಿ ಓದಲಾದ ಕಲಂ 13(2)ರ ಪ್ರಕಾರ ಶಿಕ್ಷಾರ್ಹ ಅಪರಾಧಕ್ಕಾಗಿ ಸದರಿ ಕಾಯ್ದೆಯ ಕಲಂ 19(1)(ಬಿ)ರ ಅಡಿ ಅಭಿಯೋಗಗೊಳಿಸಲು ಪರಿಷ್ಕೃತ ಮಂಜೂರಾತಿಯನ್ನು ನೀಡಿದೆ.

ಈ ಮೇಲ್ಕಂಡ ಆದೇಶವನ್ನು ಈ ಕಛೇರಿಯ ಮೊಹರು ಮತ್ತು ನನ್ನ ಸಹಿಯ ಅಡಿಯಲ್ಲಿ ದಿನಾಂಕ 23–11–2011ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಲ್.ಎಸ್.ವಾಸನ್
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

ಪಿ.ಆರ್.220

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಶ್ರೀ ಜೆ.ಬಿ. ಕುಮಾರಸ್ವಾಮಿ, ಹಿಂದಿನ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಜಿಲ್ಲೆ ಇವರ ವಿರುದ್ಧ ಶಿಸ್ತುಕ್ರಮ.

ಓದಲಾಗಿದೆ:
1) ವಾಕೈ 238 ಕೈಸೇವಿ 2001 ದಿನಾಂಕ:19–7–2005
2) ವಿಚಾರಣಾಧಿಕಾರಿಯ ವರದಿ ದಿನಾಂಕ:2–6–2007
3) ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ವಾಕೈ 264 ಕೈಸೇವಿ 2005, ದಿನಾಂಕ:18–6–2007
4) ಸರ್ಕಾರದ ಆದೇಶ ಸಂಖ್ಯೆ:ವಾಕೈ 264 ಕೈಸೇವಿ 2005, ದಿನಾಂಕ:7–8–2008
5) ಸರ್ಕಾರದ ಆದೇಶ ಸಂಖ್ಯೆ:ವಾಕೈ 179 ಕೈಸೇವಿ 2008, ದಿನಾಂಕ:4–10–2008.
6) ಸರ್ಕಾರದ ಆದೇಶ ಸಂಖ್ಯೆ:ವಾಕೈ 179 ಕೈಸೇವಿ 2008, ದಿನಾಂಕ:3–4–2009.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಶ್ರೀ ಜೆ.ಬಿ. ಕುಮಾರಸ್ವಾಮಿ, ಹಾಲಿ ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ ಜಿಲ್ಲೆ ಇವರು ಈ ಹಿಂದೆ ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಜಿಲ್ಲೆ ಇಲ್ಲಿ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಾಂಕ 18–03–2000 ರಿಂದ ಕಚೇರಿಗೆ ಅನಧಿಕೃತ ಗೈರು ಹಾಜರಿ ಹಾಗೂ ಅವರ ವಶದಲ್ಲಿದ್ದ ಕಚೇರಿಯ ಹಣ ರೂ.35,000–00 (ರೂ.ಮೂವತ್ತೈದು ಸಾವಿರ ಮಾತ್ರ)ಗಳನ್ನು ತೆಗೆದುಕೊಂಡು ಹೋಗಿರುವುದಕ್ಕೆ ಓಚರ್‌ಗಳನ್ನು ಒದಗಿಸಿರುವುದಿಲ್ಲ. ಈ ಬಗ್ಗೆ ಕಾರಣ ಕೇಳುವ ನೋಟೀಸಿಗೆ ನಿಗದಿತ ವೇಳೆಯಲ್ಲಿ ತಮ್ಮ ರಕ್ಷಣಾ ಹೇಳಿಕೆಯನ್ನು ಸಲ್ಲಸದಿದ್ದ ಕಾರಣ ಆರೋಪಿತ ಅಧಿಕಾರಿಯು ಎಸಗಿರುವ ಆರೋಪಗಳಿಗೆ ಸಂಬಂಧಿಸಿದಂತೆ, ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯಲು ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ, ಜಿಲ್ಲಾ ನ್ಯಾಯಾಧೀಶರಾದ ಶ್ರೀ ಬಿ.ಎನ್. ಶ್ರೀಕಂಠಯ್ಯ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ.239/1, ನಾಗಶ್ರೀ ನಿಲಯ, 4ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಶಿಸ್ತು ಪ್ರಾಧಿಕಾರದ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಗಳ ಮುಂದೆ ಮಂಡಿಸಲು ಕೆ.ಸಿ.ಎಸ್.,

(ಸಿ.ಸಿ.ಎ.) ನಿಯಮಾವಳಿ 1957ರ ನಿಯಮ 11 (5)(ಸಿ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಪುಟ್ಟಸ್ವಾಮಿ, ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್ ಕಚೇರಿ, ಚಿಕ್ಕಮಗಳೂರು ಜಿಲ್ಲೆ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ದಿನಾಂಕ02-06-2007ರ ವಿಚಾರಣಾ ವರದಿಯಲ್ಲಿ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ವಿಚಾರಣಾ ವರದಿಯಲ್ಲಿ ಆರೋಪಿತ ಅಧಿಕಾರಿಯ ವಿರುದ್ಧ ಮಾಡಲಾದ ಆರೋಪಗಳಾದ ದಿನಾಂಕ 18–3–2000 ರಿಂದ ಕಚೇರಿಗೆ ಹಾಜರಾಗದೆ ಕರ್ತವ್ಯಲೋಪ ಎಸಗಿರುವುದು ಅನಧಿಕೃತ ಗೈರು ಹಾಜರಿಯಾದಾಗ ಹುದ್ದೆಯ ಪ್ರಭಾರವನ್ನು ಬೇರೆ ಯಾರಿಗೂ ವಹಿಸಿಕೊಡದೆ ಕರ್ತವ್ಯಲೋಪ ಎಸಗಿದ್ದಾರೆ. ಅನಧಿಕೃತ ಗೈರು ಹಾಜರಿಯಾದಾಗ ಕಚೇರಿಯ ವಶದಲ್ಲಿದ್ದ ಸರ್ಕಾರದ ಹಣ ರೂ. 35,000–00 (ರೂ.ಮೂವತ್ತೈದು ಸಾವಿರ ಮಾತ್ರ) ಗಳನ್ನು ದುರುಪಯೋಗಪಡಿಸಿಕೊಂಡಿರುವುದು ವಿಚಾರಣಾ ವರದಿಯಲ್ಲಿ ಸಾಬೀತಾಗಿರುತ್ತದೆ. ಆರೋಪಿತ ಅಧಿಕಾರಿಯಿಂದ ಸರ್ಕಾರದ ಹಣ ರೂ.35,000–00 (ರೂ.ಮೂವತ್ತೈದು ಸಾವಿರ ಮಾತ್ರ) ಗಳನ್ನು ಬಡ್ಡಿ ಸಮೇತ ವಸೂಲಿ ಮಾಡಲು ವಿಚಾರಣಾಧಿಕಾರಿಗಳು ತಿಳಿಸಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ 18–6–2007ರ ಎರಡನೇ ಕಾರಣ ಕೇಳುವ ನೋಟೀಸಿನಲ್ಲಿ ಶ್ರೀ ಜೆ.ಬಿ. ಕುಮಾರ ಸ್ವಾಮಿ, ಸಹಾಯಕ ನಿರ್ದೇಶಕರು, ಇವರಿಗೆ ನೈಸರ್ಗಿಕ ನ್ಯಾಯಪಾಲನಾ ಕ್ರಮವಾಗಿ ವಿಚಾರಣಾ ವರದಿಯ ಪ್ರತಿಯನ್ನು ಅಧಿಕಾರಿಗೆ ಒದಗಿಸಿ, ರಕ್ಷಣಾ ಹೇಳಿಕೆಯನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಅದಾಗ್ಯೂ ಸದರಿ ಆರೋಪಿತ ಅಧಿಕಾರಿಯು ಯಾವುದೇ ಪ್ರತಿಕ್ರಿಯೆಯನ್ನು ನೀಡದೇ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

ಮೇಲೆ ಓದಲಾದ (4)ರ ಸರ್ಕಾರದ ಆದೇಶದಲ್ಲಿ ಶ್ರೀ ಜೆ.ಬಿ. ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ (ಹಿಂದಿನ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು) ಇವರು ಅರ್ಹತಾ ಪೂರ್ವ ಸೇವಾ ಅವಧಿಯಲ್ಲಿ ಸರ್ಕಾರಿ ನೌಕರರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿ ದುರ್ನಡತೆ/ಕರ್ತವ್ಯ ಚ್ಯುತಿ ಎಸಗಿರುವುದರಿಂದ ಸದರಿಯವರನ್ನು ಕರ್ನಾಟಕ ನಾಗರೀಕ ಸೇವೆಗಳು (ಪ್ರೊಬೇಷನರಿ) ನಿಯಮಗಳು 1977ರ ನಿಯಮ 7 ರ ಅನುಸಾರ ಸರ್ಕಾರಿ ಸೇವೆಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ವಿಮುಕ್ತಿಗೊಳಿಸಿದ್ದು ಹಾಗೂ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.35,000–00 (ರೂ.ಮೂವತ್ತೈದು ಸಾವಿರ ಮಾತ್ರ) ಗಳನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಾತಿ ಮಾಡಲು ಹಾಗೂ ಅಧಿಕಾರಿಯ ವಿರುದ್ಧ ಸಿವಿಲ್ ಮೊಕದ್ದಮೆ ಹೂಡಲು ಆದೇಶಿಸಲಾಗಿತ್ತು.

ಮೇಲೆ ಓದಲಾದ (5)ರ ಸರ್ಕಾರಿ ಆದೇಶದಲ್ಲಿ ಶ್ರೀ ಜೆ.ಬಿ. ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ (ಹಿಂದಿನ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು) ಇವರ ವಿರುದ್ಧ ದಿನಾಂಕ 7–8–2008ರಂದು ಹೊರಡಿಸಿದ ಸರ್ಕಾರದ ಆದೇಶ ಸಂಖ್ಯೆ: ವಾಕೈ 264 ಕೈಸೇವಿ 2005 ರನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿರುತ್ತದೆ.

ಮೇಲೆ ಓದಲಾದ (6)ರ ಸರ್ಕಾರಿ ಆದೇಶದಲ್ಲಿ ಶ್ರೀ ಜೆ.ಬಿ. ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ (ಹಿಂದಿನ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು) ಇವರ ವಿರುದ್ಧ ದಿನಾಂಕ 7–8–2008ರಂದು ಹೊರಡಿಸಿದ ಸರ್ಕಾರದ ಆದೇಶ ಸಂಖ್ಯೆ: ವಾಕೈ 264 ಕೈಸೇವಿ 2005 ರನ್ನು ತಡೆಹಿಡಿಯಲಾದ ಹಿನ್ನೆಲೆಯಲ್ಲಿ ಶ್ರೀ ಜೆ.ಬಿ. ಕುಮಾರಸ್ವಾಮಿ, ಇವರನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ ಇಲ್ಲಿ ಖಾಲಿಯಿರುವ ಸಹಾಯಕ ನಿರ್ದೇಶಕರ ಹುದ್ದೆಗೆ ಪುನರ್ ನೇಮಕ ಮಾಡಿ ಆದೇಶಿಸಲಾಗಿತ್ತು. ಹಾಗೂ ದಿನಾಂಕ3–8–2008 ರಿಂದ 5–10–2008 ರವರೆಗಿನ ಅವಧಿಯಲ್ಲಿ ಸದರಿ ಅಧಿಕಾರಿಯು ಕಾರ್ಯನಿರ್ವಹಿಸದೆ ಇರುವುದರಿಂದ ಈ ಮಧ್ಯಂತರ ಅವಧಿಯನ್ನು ಲೆಕ್ಕಕ್ಕಿಲ್ಲದ ಅವಧಿ (Dies Non) ಎಂದು ಪರಿಗಣಿಸಿ ಅದೇಶಿಸಲಾಗಿರುತ್ತದೆ.

ಶ್ರೀ ಜೆ.ಬಿ.ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ (ಹಿಂದಿನ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು) ದಿನಾಂಕ 6–5–1994ರಂದು ಸರ್ಕಾರಿ ಸೇವೆಗೆ ಸೇರಿದ್ದು, ಇವರ ಖಾಯಂ ಪೂರ್ವ ಸೇವಾವಧಿಯು ತೃಪ್ತಿಕರವಾಗಿಲ್ಲದ ಕಾರಣ, ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡಿರುವುದಿಲ್ಲ. ಈ ಅಧಿಕಾರಿಯು ಖಾಯಂ ಪೂರ್ವ ಸೇವಾವಧಿ ಪೂರ್ಣಗೊಂಡಿರದೇ ಇದ್ದರೂ ಸಹ ಈ ಅವಧಿಯಲ್ಲಿಯೇ ಇವರು ಸರ್ಕಾರಿ ಕರ್ತವ್ಯಕ್ಕೆ ಗೈರು ಹಾಜರಾಗಿ ಸರ್ಕಾರದ ಹಣ ರೂ. 35,000–00 (ರೂ. ಮೂವತ್ತೈದು ಸಾವಿರ ಮಾತ್ರ) ಗಳನ್ನು ದುರುಪಯೋಗಪಡಿಸಿಕೊಂಡಿರುವುದು ಇಲಾಖಾ ವಿಚಾರಣಾ ವರದಿಯಲ್ಲಿ ದೃಢಪಟ್ಟಿದ್ದು ಮತ್ತು ಈ ಅಧಿಕಾರಿಯ ನಡತೆಯು ಸರ್ಕಾರಿ ನೌಕರರಿಗೆ ಸಲ್ಲದ ವರ್ತನೆಯಾಗಿರುವುದರಿಂದ ಹಾಗೂ ಸದರಿಯವರು ಇನ್ನೂ ಅರ್ಹತಾಪೂರ್ವ ಸೇವಾವಧಿಯಲ್ಲಿಯೇ ಇರುವ ಕಾರಣ ಇವರನ್ನು ಸರ್ಕಾರಿ ಸೇವೆಯಿಂದ ವಿಮುಕ್ತಿಗೊಳಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಾಕೈ 179 ಕೈಸೇವಿ 2008, ಬೆಂಗಳೂರು, ದಿನಾಂಕ: 03 ನೇ ಜನವರಿ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಜೆ.ಬಿ.ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ (ಹಿಂದಿನ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು) ಇವರು ಖಾಯಂ ಪೂರ್ವ ಸೇವಾವಧಿಯಲ್ಲಿ ಸರ್ಕಾರಿ ನೌಕರರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿ/ಕರ್ತವ್ಯಚ್ಯುತಿ ಎಸಗಿರುವುದರಿಮದ ಹಾಗೂ ಸದರಿ ಅಧಿಕಾರಿಯವರ ಮೇಲಿನ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ದೃಢಪಟ್ಟಿರುವುದರಿಂದ ಸದರಿ ಅಧಿಕಾರಿಯವರನ್ನು ಕರ್ನಾಟಕ ನಾಗರೀಕ ಸೇವೆಗಳು (ಪ್ರೊಬೇಷನರಿ) ನಿಯಮಗಳು 1977ರ ನಿಯಮ 7ರ ಅನುಸಾರ ಸರ್ಕಾರಿ ಸೇವೆಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ವಿಮುಕ್ತಿಗೊಳಿಸಿದೆ.

ಮುಂದುವರೆದು, ಶ್ರೀ ಜೆ.ಬಿ.ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಇವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.35,000/– (ರೂಪಾಯಿ ಮೂವತ್ತೈದು ಸಾವಿರ ಮಾತ್ರ) ಗಳನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಾತಿ ಮಾಡಲು ಹಾಗೂ ಅಧಿಕಾರಿಯ ವಿರುದ್ಧ ಸಿವಿಲ್ ಮೊಕದ್ದಮೆ ಹೂಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.221

ಎಲ್.ಎಸ್.ವಾಸನ್

ಸರ್ಕಾರದ ಅಧೀನ ಕಾರ್ಯದರ್ಶಿ

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ.ಎ. ಹಾಜೀಬಾಯಿ, ಹಿಂದಿನ ತಹಶೀಲ್ದಾರ್, ಮಾನ್ವಿ ತಾಲ್ಲೂಕು (ಪ್ರಸ್ತುತ ನಿವೃತ್ತ) ಇವರ ವಿರುದ್ಧದ ಶಿಸ್ತು ಕ್ರಮ ಕೈಬಿಡುವ ಬಗ್ಗೆ.

ಓದಲಾಗಿದೆ: 1. ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ಇವರ ಪತ್ರ ಸಂಖ್ಯೆ: ಕಂಇರಾ/ಸಿಬ್ಬಂದಿ/2009-10, ದಿನಾಂಕ:7-12-2009

2. ಸರ್ಕಾರದ ಆದೇಶ ಸಂಖ್ಯೆ:ಕಂಇ 35 ಎಡಿಇ 2009, ದಿನಾಂಕ:8-12-2009.
3. ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರ ಪತ್ರ ಸಂಖ್ಯೆ:ಕಂದಾಯ/ಸಿಬ್ಬಂದಿ:1:165:2009-10, ದಿನಾಂಕ:26-6-2010.
4. ಕಾರಣ ಕೇಳುವ ನೋಟೀಸ್ ದಿನಾಂಕ:11-8-2010.
5. ಶ್ರೀ ಎಂ.ಎ.ಹಾಜಿಬಾಯಿ, ಹಿಂದಿನ ತಹಶೀಲ್ದಾರ್, ಇವರ ಲಿಖಿತ ಸಮಜಾಯಿಷಿ ದಿನಾಂಕ:9-9-2010.
6. ಸರ್ಕಾರದ ಆದೇಶ ಸಂಖ್ಯೆ:ಕಂಇ35 ಎಡಿಇ 2009, ದಿನಾಂಕ:26-10-2010.
7. ವಿಚಾರಣಾಧಿಕಾರಿಗಳ ವರದಿ ದಿನಾಂಕ:13-7-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ 7-12-2009ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ಇವರು ಶ್ರೀ ಎಂ.ಎ. ಹಾಜಿಬಾಯಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ತಹಶೀಲ್ದಾರರಾಗಿ ದಿನಾಂಕ 21-11-2008 ರಿಂದ ಕಾರ್ಯ ನಿರ್ವಹಿಸುತ್ತಿದ್ದು ಅವರ ನೆರೆಪರಿಹಾರ ಅವ್ಯವಹಾರಗಳ ಕುರಿತು ವಿವಿಧ ಸಂಘ ಸಂಸ್ಥೆಗಳು ಸಲ್ಲಿಸಿರುವ ಮನವಿ ಪತ್ರಗಳನ್ನು ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳಿಸಿರುವುದಾಗಿ ತಿಳಿಸಿರುತ್ತಾರೆ.

ಸದರಿ ಮನವಿಗಳನ್ನು ಸರ್ಕಾರವು ಪರಿಶೀಲಿಸಿದಾಗ, ಶ್ರೀ ಹಾಜಿಬಾಯಿ, ತಹಶೀಲ್ದಾರ್, ಮಾನ್ವಿ ತಾಲ್ಲೂಕು ಇವರ ಬಗ್ಗೆ ಇನ್ನೂ ಅನೇಕ ಸಂಘ ಸಂಸ್ಥೆಗಳು ಇವರ ಅವ್ಯವಹಾರದ ಬಗ್ಗೆ ದೂರುಗಳನ್ನು ಸಲ್ಲಿಸಿರುತ್ತಾರೆ. ಸರ್ಕಾರವು ನೆರೆ ಸಂತ್ರಸ್ಥರ ಬಿದ್ದ ಮನೆಗಳಿಗೆ, ನಾಶವಾದ ಬೆಳೆಗಳಿಗೆ ಪರಿಹಾರ ವಿತರಿಸಲು ಸಾಕಷ್ಟು ಹಣ ಬಿಡುಗಡೆ ಮಾಡಿದ್ದು, ಈ ಹಣವನ್ನು ಸರ್ಕಾರದ ನಿಯಮಾನುಸಾರ ಪರಿಹಾರ ವಿತರಿಸುವಲ್ಲಿ ಅಕ್ರಮ, ಅವ್ಯವಹಾರ ಎಸಗಿ ಸರ್ಕಾರಿ ನೌಕರರಿಗೆ ಸಲ್ಲದ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಇದು ಅಲ್ಲದೆ ಈ ಹಿಂದೆ ಇವರು ವಿಶೇಷ ತಹಶೀಲ್ದಾರ್, ಯಡ್ರಾವಿ, ಜೇವರ್ಗಿ ತಾಲ್ಲೂಕು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಇವರು ಚುನಾವಣೆಯಂತಹ ಮಹತ್ವದ ಕೆಲಸಗಳನ್ನು ನಿರ್ವಹಿಸುವಲ್ಲಿ ನಿರ್ಲಕ್ಷ್ಯತನ ಹಾಗೂ ಬೇಜವಾಬ್ದಾರಿತನ ತೋರಿಸಿದ್ದಕ್ಕಾಗಿ ಅವರನ್ನು ದಿನಾಂಕ 12-05-2008ರಲ್ಲಿ ಜಿಲ್ಲಾಧಿಕಾರಿಗಳು ಗುಲ್ಬರ್ಗಾ ಜಿಲ್ಲೆ ಇವರು ಅಮಾನತ್ತುಗೊಳಿಸಿರುವುದು ಸಹ ಇವರ ಕರ್ತವ್ಯಲೋಪಕ್ಕೆ ಸಾಕ್ಷಿಯಾಗಿರುತ್ತದೆ. ಇವರು ತಾಲ್ಲೂಕು ತಹಶೀಲ್ದಾರ್‌ರಾಗಿ ಕಾರ್ಯನಿರ್ವಹಿಸಲು ಅಸಮರ್ಥತೆ, ನಿರ್ಲಕ್ಷ್ಯತನ, ಬೇಜವಾಬ್ದಾರಿತನ, ಸರ್ಕಾರದ ಹಣ ದುರುಪಯೋಗದಂತಹ ಆಪಾದನೆಗಳನ್ನು ಎಸಗಿರುವುದರಿಂದ ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿದ್ದರಿಂದ ಮೇಲೆ ಓದಲಾದ ಕ್ರ.ಸಂ.(2)ರ ದಿನಾಂಕ8-12-2009ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 10(1)ಡಿ ಮತ್ತು 10(3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಮಾನತ್ತುಗೊಳಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ.(3)ರ ದಿನಾಂಕ 26-6-2010ರ ಪತ್ರದಲ್ಲಿ ಅಪರ ಜಿಲ್ಲಾಧಿಕಾರಿಗಳು, ರಾಯಚೂರು ರವರು ಶ್ರೀ ಎಂ.ಎ.ಹಾಜುಬಾಯಿ, ಹಿಂದಿನ ತಹಶೀಲ್ದಾರ್, ಮಾನ್ವಿ ಇವರ ವಿರುದ್ಧ ದೋಷಾರೋಪ ಪಟ್ಟಿ ಅನುಬಂಧ 1-4 ರವರೆಗೆ ತಯಾರಿಸಿ ಸಂಬಂಧಿಸಿದ ಮೂಲ ಕಡತದ ದಾಖಲೆಗೊಂದಿಗೆ ಕಳುಹಿಸಿದ್ದರು.

ಶ್ರೀ ಎಂ.ಎ. ಹಾಜಿಬಾಯಿ, ಹಿಂದಿನ ತಹಶೀಲ್ದಾರ್, ಮಾನ್ವಿರವರಿಗೆ ಅವರ ವಿರುದ್ಧದ ಆರೋಪದ ಬಗ್ಗೆ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ದಿನಾಂಕ 11-8-2010ರ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು. ಸದರಿ ಕಾರಣ ಕೇಳುವ ನೋಟೀಸಿಗೆ ಆರೋಪಿತ ಅಧಿಕಾರಿಗಳು ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ದಿನಾಂಕ 9-9-2010ರಲ್ಲಿ ದಿನಾಂಕ 11-8-2010ರ ಕಾರಣ ಕೇಳುವ ನೊಟೀಸಿಗೆ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಹೇಳಿಕೆಯಲ್ಲಿ ಆರೋಪಿತ ಅಧಿಕಾರಿಗಳು ಮೇಲಿನ ಆರೋಪವನ್ನು ಒಪ್ಪಿಕೊಳ್ಳದೇ ಇದ್ದುದರಿಂದ ಸದರಿ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯುವುದೋಸ್ಕರ ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ದಿನಾಂಕ 26-10-2010ರ ಆದೇಶದಲ್ಲಿ ನೇಮಿಸಲಾಗಿತ್ತು.

ವಿಚಾರಣಾಧಿಕಾರಿಗಳು ಸದರಿ ಪ್ರಕರಣದ ವಿಚಾರಣೆ ನಡೆಸಿ ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ದಿನಾಂಕ 13-7-2011ರಲ್ಲಿ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. "ಸದರಿ ಇಲಾಖಾ ವಿಚಾರಣಾ ಪ್ರಕರಣದಲ್ಲಿ ಅನುಬಂಧ 1 ಮತ್ತು 2 ರಲ್ಲಿಯ ಎಲ್ಲಾ ದೋಷಾರೋಪಣೆಗಳು ದೋಷಾರೊಪಿತ ಸರ್ಕಾರಿ ನೌಕರರ ಮೇಲೆ ನಿಶ್ಚಳವಾಗಿ ಮತ್ತು ನಿಸ್ಸಂದೇಹವಾಗಿ ರುಜುವಾತು ಆಗಿರುವುದಿಲ್ಲ ಮತ್ತು ನ್ಯಾಯಾಲಯದ ದೃಷ್ಟಿಯಿಂದ, ಇಲಾಖೆ ವತಿಯಿಂದ ಪ್ರಾಥಮಿಕ ವಿಚಾರಣೆ ನಡೆಸಿ ವರದಿ ಪಡೆದುಕೊಂಡು ಮುಂದಿನ ಕಾನೂನುಬದ್ಧ ಕ್ರಮ ಜರುಗಿಸಬಹುದಾಗಿದೆ" ಎಂದು ವರದಿ ನೀಡಿರುತ್ತಾರೆ.

ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ಆರೋಪಿತ ಅಧಿಕಾರಿಗಳ ವಿರುದ್ಧ ಆರೋಪಗಳಿಗೆ ಸಾಕ್ಷಿದಾರರು ಯಾರು ಇರುವುದಿಲ್ಲದಿರುವುದನ್ನು ಹಾಗೂ ಗುರುತಿಸಲಾದ ದಾಖಲೆಗಳು ಇರುವುದಿಲ್ಲವಾದ್ದರಿಂದ ಹಾಗೂ ಆರೋಪಿತ ಅಧಿಕಾರಿಯು ಈಗಾಗಲೇ ಸೇವೆಯಿಂದ ನಿವೃತ್ತಿಯಾಗಿರುವುದರಿಂದ ವಿಚಾರಣಾಧಿಕಾರಿಗಳು ನೀಡಿರುವ ವರದಿಯನ್ನು ಅಂಗೀಕರಿಸಿ, ಶ್ರೀ ಎಂ.ಎ.ಹಾಜಿಬಾಯಿ, ಹಿಂದಿನ ತಹಶೀಲ್ದಾರ್, ಮಾನ್ವಿ, ಪ್ರಸ್ತುತ ನಿವೃತ್ತ ತಹಶೀಲ್ದಾರ್ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಡಲು ನಿರ್ಧರಿಸಿರುವುದರಿಂದ ಈ ಕೆಳಕಂಡ ಆದೇಶ

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 35 ಎಡಿಇ 2009, ಬೆಂಗಳೂರು, ದಿನಾಂಕ: 05ನೇ ಡಿಸೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎಂ.ಎ. ಹಾಜಿಬಾಯಿ, ಹಿಂದಿನ ತಹಶೀಲ್ದಾರ್, ಮಾನ್ವಿ, ಪ್ರಸ್ತುತ ನಿವೃತ್ತ ಇವರ ವಿರುದ್ಧ ಇಲಾಖಾ ವಿಚಾರಣೆ ಪ್ರಕರಣದಲ್ಲಿ ಆಪಾದನೆಗಳು ಸಾಬೀತಾಗಿಲ್ಲದ ಕಾರಣ ಅವರ ವಿರುದ್ಧ ಹೂಡಲಾದ ಇಲಾಖಾ ವಿಚಾರಣೆಯನ್ನು ಕೈಬಿಟ್ಟು ಆದೇಶಿಸಲಾಗಿದೆ.

ಈ ಪ್ರಕರಣದ ಮಟ್ಟಿಗೆ ಸದರಿ ಇಲಾಖಾ ವಿಚಾರಣೆ ನಡೆಯದಿದ್ದರೆ ಶ್ರೀಯುತರು ಯಾವ ಸೌಲಭ್ಯಗಳನ್ನು ಪಡೆಯುತ್ತಿದ್ದರೊ ಆ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್.ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್.222

ಕಂದಾಯ ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆಯಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಮುಮಕಾ/2255/2011,ದಿನಾಂಕ:12-12-2011.
2 .ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ:ಮುಮಕಾ/2258/2011,ದಿನಾಂಕ:12-12-2011.

ಪ್ರಸ್ತಾವನೆ :

ಮೇಲೆ (1) ಮತ್ತು (2)ರಲ್ಲಿ ಅನುಕ್ರಮವಾಗಿ ಓದಲಾದ ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ಬಿಜಾಪುರ ಜಿಲ್ಲೆಯ ಬಿಜಾಪುರ ತಾಲ್ಲೂಕಿನ ಕೊಟ್ಯಾಳ ಗ್ರಾಮದಲ್ಲಿ 477 ಮನೆಗಳನ್ನು ಮೈಸೂರು ನಾಗರೀಕ ವೇದಿಕೆ ನೆರವಿನಿಂದ ನಿರ್ಮಾಣ ಮಾಡಲು ಪ್ರತಿ ಮನೆಗೆ ರೂ.108000 ಗಳನ್ನು ನಿಗದಿಪಡಿಸಿದ್ದು, ಇದು ಪ್ರತಿ ಮೆನೆಗೆ ರೂ.1,23,500/- ವೆಚ್ಚವಾಗಿರುತ್ತದೆ. ಆದ್ದರಿಂದ, ಪ್ರತಿ ಮನೆಗೆ ರೂ.7,000/-ದಂತೆ ಒಟ್ಟು ರೂ.33,39,000/-ಗಳನ್ನು ಬಿಜಾಪುರ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಹಾಗೂ ಇಂಡಿ ತಾಲ್ಲೂಕಿನ ತಗ್ಗಿಹಳ್ಳಿ ಗ್ರಾಮದಲ್ಲಿ ಆಸರೆ ಯೋಜನೆಯಡಿ 286 ಮನೆಗಳನ್ನು ನಿರ್ಮಿಸಲು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಾಪುರ ಇವರಿಗೆ ವಹಿಸಿದ್ದು, ಇದರ ಅಂದಾಜು ವೆಚ್ಚ 4.04 ಕೋಟಿಯಾಗಿದ್ದು, ಇದರಲ್ಲಿ 2.00 ಕೋಟಿ ಹಣವನ್ನು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ. ಉಳಿದ ಹಣ ರೂ.2.04 ಕೋಟಿಗಳನ್ನು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಿಜಾಪುರ ಇವರಿಗೆ ಬಿಡುಗಡೆ ಮಾಡಲು ಮಾನ್ಯ ಮುಖ್ಯಮಂತ್ರಿಗಳು ಅನುಮೋದನೆ ನೀಡಿದ್ದು, ಅದರಂತೆ ಅನುದಾನ ಬಿಡುಗಡೆ ಮಾಡಲು ಕೋರಿರುವ ಹಿನ್ನಲೆಯಲ್ಲಿ, ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಈ ಹಿನ್ನಲೆಯಲ್ಲಿ, ಅನುದಾನ ಬಿಡುಗಡೆ ಮಾಡಲು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 174 ಟಿಎನ್‌ಆರ್ 2010, ಬೆಂಗಳೂರು, ದಿನಾಂಕ: 26ನೇ ಡಿಸೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬಿಜಾಪುರ ಜಿಲ್ಲೆಯ ಬಿಜಾಪುರ ತಾಲ್ಲೂಕಿನ ಕೊಟ್ಯಾಳ ಗ್ರಾಮದಲ್ಲಿ ಮೈಸೂರು ನಾಗರೀಕ ವೇದಿಕೆ ವತಿಯಿಂದ 477 ಮನೆಗಳನ್ನು ನಿರ್ಮಾಣ ಮಾಡಿದ್ದಕ್ಕೆ, ರೂ.33,39,000 (ರೂಪಾಯಿ ಮೂವತ್ತಮೂರು ಲಕ್ಷ ಮೂವತ್ತೊಂಬತ್ತು ಸಾವಿರ ಮಾತ್ರ)ಗಳನ್ನು ಜಿಲ್ಲಾಧಿಕಾರಿಗಳು, ವಿಜಾಪುರ ಜಿಲ್ಲೆ ಇವರಿಗೆ ಹಾಗೂ ಇಂಡಿ ತಾಲ್ಲೂಕಿನ ತಗ್ಗೀಹಳ್ಳಿ ಗ್ರಾಮದಲ್ಲಿ ಆಸರೆ ಮನೆಗಳನ್ನು ನಿರ್ಮಿಸಲು ಬಾಕಿ ಹಣ ರೂ.200.40 (ರೂಪಾಯಿ ಇನ್ನೂರು ಲಕ್ಷ ನಲವತ್ತು ಸಾವಿರ ಮಾತ್ರ) ಲಕ್ಷಗಳನ್ನು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಿಜಾಪುರ ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆ 8235-00-111-0-02 "Public Contiributions to Calamity Relief" ಅಡಿಯಲ್ಲಿ ಡ್ರಾ ಮಾಡುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ, ಬಿಜಾಪುರ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಿಜಾಪುರ ಇವರ ಪೇಯೀಸ್ ರಸೀದಿ ಬಿಲ್ಲು (ಸಿಟಿಎಸ್-8) ತಯಾರಿಸಿ ಮೇಲು ರುಜು ಮಾಡಿ ಬಿಜಾಪುರ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿಕೊಳ್ಳಲು ಆದೇಶಿಸಿದೆ. ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿಯೇ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದು.

ಅನುದಾನ ವೆಚ್ಚ ಮಾಡಿದ್ದಕ್ಕೆ, ಸಂಬಂಧಪಟ್ಟ ಅಧಿಕಾರಿಗಳು ಹಣಬಳಕೆ ಪ್ರಮಾಣ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸುವುದು. ಹಾಗೂ ಕಾಮಗಾರಿಗಳ ಬಗ್ಗೆ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಸಹ ಸರ್ಕಾರಕ್ಕೆ ಸಲ್ಲಿಸುವುದು.

ಕೊಟ್ಯಾಳ ಗ್ರಾಮದಲ್ಲಿ ಆಸರೆ ಮನೆಗಳ ಹೆಚ್ಚುವರಿ ಮೊತ್ತವನ್ನು ಸಂಬಂಧಪಟ್ಟ ಗುತ್ತಿಗೆದಾರರಿಗೆ ಮೈಸೂರು ನಾಗರೀಕ ವೇದಿಕೆಯವರ ಮುಖಾಂತರ ಎಲ್ಲಾ 477 ಮನೆಗಳು ಪೂರ್ಣಗೊಂಡಿರುವುದನ್ನು ಖಾತರಿಪಡಿಸಿಕೊಂಡು, ಪಾವತಿಸಲು ಆದೇಶಿಸಿದೆ.

ಈ ಆದೇಶವನ್ನು ಮೇಲೆ ಓದಲಾದ ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂ:ಮುಮಕಾ/2225/2011 ಮತ್ತು ಮುಮಕಾ/2258/2011, ದಿನಾಂಕ 12-12-2011ರನ್ವಯ ಹೊರಡಿಸಲಾಗಿದೆ.

ಪಿ.ಆರ್.223

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎಂ.ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ. & ಸೇವೆಗಳು-2)

ಕಂದಾಯ ಸಚಿವಾಲಯ

ವಿಷಯ : ಗದಗ ಜಿಲ್ಲೆಯ ಬಿ.ಎಸ್.ಬೇಲೇರಿ ಮತ್ತು ಬಸರಕೋಡು ಗ್ರಾಮಗಳ ಆಸರೆ ಮನೆಗಳ ನಿರ್ಮಾಣಕ್ಕೆ ಹೆಚ್ಚುವರಿ ಅನುದಾನ ಬಿಡುಗಡೆ ಬಗ್ಗೆ.

ಓದಲಾಗಿದೆ: ಗದಗ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ:ಪುನರ್ವಸತಿ/ಸಿಆರ್–03/2010–11 ದಿನಾಂಕ:17–10–2011

ಪ್ರಸ್ತಾವನೆ :

ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಬಿ.ಎಸ್.ಬೇಲೇರಿ ಹಾಗೂ ಬಸರಕೋಡು ಗ್ರಾಮಗಳಲ್ಲಿ ಮೈಸೂರು ನಾಗರೀಕ ವೇದಿಕೆಯವರಿಂದ ನಿರ್ಮಿಸಲಾಗುತ್ತಿರುವ ಒಟ್ಟು 631 ಆಸರೆ ಮನೆಗಳಿಗೆ ಪ್ರತಿ ಮನೆಗೆ ರೂ.7,000/– ದಂತೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವಂತೆ ಮೈಸೂರು ನಾಗರೀಕ ವೇದಿಕ ಪರವಾಗಿ ಆಸರೆ ಮನೆಗಳನ್ನು ನಿರ್ಮಾಣ ಮಾಡುತ್ತಿರುವ ಗುತ್ತಿಗೆದಾರರು ಮನವಿ ಸಲ್ಲಿಸಿದ್ದು, ಸದರಿಯವರ ಮನವಿಯಂತೆ ಒಟ್ಟು ರೂ.44.17 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಮೇಲೆ ಓದಲಾದ ಪತ್ರದಲ್ಲಿ ಗದಗ ಜಿಲ್ಲಾಧಿಕಾರಿಗಳು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 274 ಟಿಎನ್ಆರ್ 2011, ಬೆಂಗಳೂರು, ದಿನಾಂಕ: 19ನೇ ಡಿಸೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಬಿ.ಎಸ್.ಬೇಲೇರಿ ಹಾಗೂ ಬಸರಕೋಡು ಗ್ರಾಮಗಳಲ್ಲಿ ಮೈಸೂರು ನಾಗರೀಕ ವೇದಿಕೆಯವರಿಂದ ನಿರ್ಮಿಸಲಾಗುತ್ತಿರುವ ಒಟ್ಟು 631 ಆಸರೆ ಮನೆಗಳಿಗೆ ಪ್ರತಿ ಮನೆಗೆ ರೂ.7,000/– ದಂತೆ ಹೆಚ್ಚುವರಿಯಾಗಿ ಒಟ್ಟು ರೂ.44.17 ಲಕ್ಷ (ರೂಪಾಯಿ ನಲವತ್ತ ನಾಲ್ಕು ಲಕ್ಷ ಹದಿನೇಳು ಸಾವಿರ ಮಾತ್ರ) ಗಳನ್ನು ಜಿಲ್ಲಾಧಿಕಾರಿಗಳು, ಗದಗ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 8235–00–111–0–02 Public Contiributions to Calamity Relief ಅಡಿಯಲ್ಲಿ ಭರಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಡ್ರಾ ಮಾಡಲು ಪೇಯೀಸ್ ರಸೀದಿ(ಸಿಟಿಎಸ್–8) ಬಿಲ್ಲು ತಯಾರಿಸಿ, ಮೇಲು ಸಹಿ ಮಾಡಿ ಖಜಾನೆಗೆ ಸಲ್ಲಿಸಲು ಸೂಚಿಸಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಹಣ ಬಳಕೆ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು. ಬಿಡುಗಡೆ ಮಾಡಿರುವ ಹಣವನ್ನು ಹೇಗೆ ಉಪಯೋಗಿಸಲಾಗಿದೆ ಮತ್ತು ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಮೊತ್ತವನ್ನು ಜಿಲ್ಲಾಧಿಕಾರಿಗಳು, ಸಂಬಂಧಪಟ್ಟ ಗುತ್ತಿಗೆದಾರರಿಗೆ ಮೈಸೂರು ನಾಗರೀಕ ವೇದಿಕೆಯವರ ಮುಖಾಂತರ ಎಲ್ಲಾ 631 ಮನೆಗಳು ಪೂರ್ಣಗೊಂಡಿರುವುದನ್ನು ಖಾತರಿಪಡಿಸಿಕೊಂಡು ಪಾವತಿಸಲು ಆದೇಶಿಸಿದೆ.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎಂ.ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ. & ಸೇವೆಗಳು–2)

ಪಿ.ಆರ್.224

ಕಂದಾಯ ಸಚಿವಾಲಯ

ವಿಷಯ : ಶ್ರೀ ಲಕ್ಷ್ಮೀನಾರಾಯಣ, ತಹಶೀಲ್ದಾರ್, ಪ್ರಾದೇಶಿಕ್ತ ಆಯುಕ್ತರ ಕಛೇರಿ, ಮೈಸೂರು ರವರ ತಾಯಿ ಶ್ರೀಮತಿ ಸುಬ್ಬಲಕ್ಷ್ಮಮ್ಮರವರಿಗೆ ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಎರಡು ಮೊಣಕಾಲುಗಳ (Knee replacement) ಮತ್ತು ಹಿಪ್ ಪಾಯಿಂಟ್ (Hip point left leg) ಶಸ್ತ್ರ ಚಿಕಿತ್ಸೆಗಾಗಿ ವೈದ್ಯಕೀಯ ಮುಂಗಡ ಮಂಜೂರಾತಿ ಕೋರಿರುವ ಕುರಿತು.

ಓದಲಾಗಿದೆ : ಪ್ರಾದೇಶಿಕ ಆಯುಕ್ತರು, ಮೈಸೂರು ಇವರ ಪತ್ರ ಸಂಖ್ಯೆ: ಎಸಿಟಿ(4)ಸಿಆರ್/ಎಂ.ಆರ್.ಬಿಲ್ಸ್. 41/2011–12, ದಿನಾಂಕ 16–12–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ 16–12–2011ರ ಪತ್ರದಲ್ಲಿ ಪ್ರಾದೇಶಿಕ ಆಯುಕ್ತರು, ಮೈಸೂರು ಇವರು ಶ್ರೀ ಲಕ್ಷ್ಮೀನಾರಾಯಣ, ತಹಶೀಲ್ದಾರ್, ಪ್ರಾದೇಶಿಕ ಆಯುಕ್ತರ ಕಛೇರಿ, ಮೈಸೂರು ರವರು ಅವರ ತಾಯಿ ಶ್ರೀಮತಿ ಸುಬ್ಬಲಕ್ಷ್ಮಮ್ಮ ರವರಿಗೆ ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಎರಡು ಮೊಣಕಾಲುಗಳ ಮತ್ತು ಹಿಪ್ ಜಾಯಿಂಟ್ ಶಸ್ತ್ರ ಚಿಕಿತ್ಸೆಗಾಗಿ ಅಂದಾಜು ವೆಚ್ಚ ರೂ. 7.00 ಲಕ್ಷಗಳಲ್ಲಿ ಶೇಕಡ 80% ರಷ್ಟು ಮುಂಗಡ ಮಂಜೂರು ಮಾಡುವಂತೆ ಕೋರಿ ಮನವಿ ಹಾಗೂ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜ್, ಆಸ್ಪತ್ರೆ, ಬೆಂಗಳೂರು ರವರಿಂದ ನೀಡಿರುವ ದಿನಾಂಕ 24–11–2011ರ ಪತ್ರವನ್ನು ನೀಡಿರುವುದಾಗಿ ತಿಳಿಸುತ್ತಾ, ಸದರಿ ಅಧಿಕಾರಿಯವರು 'ಬಿ' ವರ್ಗಕ್ಕೆ ಸೇರಿದವರಾಗಿದ್ದು, ಮುಂಗಡ ಮಂಜೂರು ಮಾಡುವ ಅಧಿಕಾರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಅಧಿಕಾರಿಯವರ ತಾಯಿಯವರು ಮಾಸಿಕ ರೂ. 3657/– ಕುಟುಂಬ ಪಿಂಚಣಿ ಪಡೆಯುತ್ತಿದ್ದಾರೆಂದೂ ಅವರೊಡನೆ ವಾಸವಾಗಿರುತ್ತಾರೆಂದೂ ಮತ್ತು ಅವಲಂಬಿತರೆಂದೂ ಸಹ ನಿವೇದಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

ಮುಂದುವರೆದು, ಕರ್ನಾಟಕ ಸರ್ಕಾರಿ ನೌಕರರ ವೈದ್ಯಕೀಯ ಹಾಜರಾತಿ ನಿಯಮ 1963ಕ್ಕೆ ಅಧಿಸೂಚನೆ ಸಂಖ್ಯೆ: ಸಿಆಸುಇ 2 ಎಸ್ಎಂಆರ್ 2008, ದಿನಾಂಕ 24–10–2009ರಲ್ಲಿ ತಿದ್ದುಪಡಿಯಾಗಿರುವಂತೆ ಅನುಸೂಚಿ 2 ಮತ್ತು 3ನ್ನು ಕೈಬಿಡಲಾಗಿದ್ದು, ಸದರಿ ಅಧಿಸೂಚನೆಯ ಕಂಡಿಕೆ 5(ii)(3) ರಲ್ಲಿ ಕೆಳಕಂಡಂತೆ ಇದೆ.

"ಪ್ಯಾಕೇಜ್ ದರ/ದರಗಳಂತೆ ಅನುಸೂಚಿ 1 ರಲ್ಲಿ ಹೇಳಲಾದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ ಪಡೆದ ರೋಗ ನಿರ್ಣಯ ವಿಧಾನ ಮತ್ತು ಚಿಕಿತ್ಸೆಗಳ ವೈದ್ಯಕೀಯ ವೆಚ್ಚದ ಮರು ಪಾವತಿಯು ಭಾರತ ಸಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು

ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳಡಿಯಲ್ಲಿ (CGHS) ಕಾಲಕಾಲಕ್ಕೆ ವಿವಿಧ ರೋಗ ನಿರ್ಣಯ ವಿಧಾನಗಳಿಗೆ ಮತ್ತು ಚಿಕಿತ್ಸೆಗಳಿಗೆ ನಿಗದಿ ಪಡಿಸಿರುವಂತಿರತಕ್ಕದ್ದು".

ಭಾರತ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಎಸ್ 11011/23/2009 CGHSD II/Hospital cell/part III ನವದೆಹಲಿ ದಿನಾಂಕ 17–08–2010ರಲ್ಲಿ ಲಗತ್ತಾದ ದರಪಟ್ಟಿಯ ಕ್ರಮಾಂಕ 1138 ರಲ್ಲಿ Total hip replacement ಗಾಗಿ ರೂ. 16,200–00 Non-NABH (National accereditation board for hospitals and health care providers) ಹಾಗೂ ಕ್ರ.ಸಂ. 1140 ರಲ್ಲಿ Total knee joint replacement ಗಾಗಿ ರೂ. 1,10,000–00 ರಂತೆ ಎರಡು Knee joint replacement ಗಾಗಿ ರೂ. 2,20,000–00 ರಂತೆ ಒಟ್ಟು ರೂ. 2,36,200–00 ಅರ್ಹತೆಯಿದ್ದು, ಶೇ. 80 ರಷ್ಟು ಮುಂಗಡ ರೂ. 1,88,960–00 ಮಂಜೂರು ಮಾಡುವ ಸಲುವಾಗಿ ಈ ಬಗ್ಗೆ ಸೇಂಟ್ ಜಾನ್ಸ್ ಮೆಡಿಕಲ್ ಆಸ್ಪತ್ರೆಯವರು ನೀಡಿರುವ ಪತ್ರ ಹಾಗೂ ಅಧಿಕಾರಿಗಳ ಮುಂಗಡ ಕೋರಿಕೆಯನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

ಪ್ರಾದೇಶಿಕ ಆಯುಕ್ತರು, ಮೈಸೂರು ಇವರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಸರ್ಕಾರದಿಂದ ಅಧಿಸೂಚಿತವಾದ ಸೇಂಟ್ ಜಾನ್ಸ್ ಮೆಡಿಕಲ್ ಆಸ್ಪತ್ರೆ, ಬೆಂಗಳೂರು ಇಲ್ಲಿನ ವೈದ್ಯರು ಶಸ್ತ್ರ ಚಿಕಿತ್ಸೆಗೆ ಅಂದಾಜಿಸಿರುವ ಒಟ್ಟು 2,36,200.00 ಗಳಲ್ಲಿ ಶೇ. 80 ರಷ್ಟು ಅಂದರೆ, ರೂ. 1,88,960.00 ಗಳನ್ನು ಶ್ರೀಯುತರು ಸಲ್ಲಿಸುವ ಅಂತಿಮ ಬಿಲ್ಲಿನಲ್ಲಿ ಸರಿಹೊಂದಿಸಿಕೊಳ್ಳುವ ಷರತ್ತುಗೊಳಪಟ್ಟು ಮಂಜೂರು ಮಾಡಲು ಸರ್ಕಾರವು ನಿರ್ಧರಿಸಿರುವುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 543 ಎಎಸ್‌ಡಿ 2011, ಬೆಂಗಳೂರು, ದಿನಾಂಕ 22–12–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಲಕ್ಷ್ಮೀನಾರಾಯಣ, ತಹಶೀಲ್ದಾರ್, ಪ್ರಾದೇಶಿಕ ಆಯುಕ್ತರ ಕಛೇರಿ, ಮೈಸೂರು ರವರ ತಾಯಿ ಶ್ರೀಮತಿ ಸುಬ್ಬಲಕ್ಷ್ಮಮ್ಮ ರವರಿಗೆ ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಎರಡು ಮೊಣಕಾಲುಗಳ (Knee replacement) ಮತ್ತು ಹಿಪ್ ಪಾಯಿಂಟ್ (Hip point left leg) ಶಸ್ತ್ರ ಚಿಕಿತ್ಸೆಗೆ ಅಂತಿಮ ಬಿಲ್ಲಿನಲ್ಲಿ ಸರಿಹೊಂದಿಸಿಕೊಳ್ಳುವ ಷರತ್ತುಗೊಳಪಟ್ಟಂತೆ ಸದರಿ ಶಸ್ತ್ರ ಚಿಕಿತ್ಸೆಗೆ ಸೇಂಟ್ ಜಾನ್ಸ್ ಮೆಡಿಕಲ್ ಆಸ್ಪತ್ರೆಯ ವೈದ್ಯರು ಅಂದಾಜಿಸಿರುವ ಒಟ್ಟು ರೂ. 2,36,200.00 ಗಳಲ್ಲಿ ಶೇ. 80 ರಷ್ಟು ಅಂದರೆ ರೂ. 1,88,960.00 (ಒಂದು ಲಕ್ಷದ ಎಂಬತ್ತೆಂಟು ಸಾವಿರದ ಒಂಬೈನೂರ ಅರವತ್ತು ರೂಪಾಯಿಗಳು ಮಾತ್ರ) ಮುಂಗಡವಾಗಿ ಮಾಂಜೂರು ಮಾಡಿ ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಗೋಪಾಲಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 225 ಕಂದಾಯ ಇಲಾಖೆ (ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ಹೇಮಾವತಿ ಹಾಗೂ ಯಗಚಿ ಯೋಜನೆಗಳಲ್ಲಿ ಶೀತಪೀಡತವೆಂದು ಪರಿಗಣಿಸಿ ಸ್ಥಳಾಂತರಗೊಳಿಸಲು ಗುರುತಿಸಲಾಗಿದ್ದ ಗ್ರಾಮಗಳು ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸಿನಂತೆ, ಶೀತಪೀಡಿತವಾಗಿಲ್ಲವೆಂದು ಅವುಗಳನ್ನು ಸ್ಥಳಾಂತರ ಪಟ್ಟಿಯಿಂದ ಕೈಬಿಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂ. ಆರ್.ಡಿ. 120 ಆರ್‌ಇಹೆಚ್ 92(ಭಾಗ) ದಿನಾಂಕ 15–4–1999.
2) ಸರ್ಕಾರದ ಆದೇಶ ಸಂ. ಕಂಇ. 215 ಆರ್.ಇ.ಹೆಚ್. 2008, ದಿನಾಂಕ 11–12–2008
3) ಹೇಮಾವತಿ ಮತ್ತು ಯಗಚಿ ಯೋಜನೆಗಳಲ್ಲಿ ಶೀತಪೀಡಿತವಾಗಿರುವ ಗ್ರಾಮಗಳನ್ನು ಗುರುತಿಸಿ ಸ್ಥಳಾಂತರಿಸಲು ಶಿಫಾರಸ್ಸು ಮಾಡುವ ಬಗ್ಗೆ ರಚಿಸಿರುವ ಉನ್ನತ ಮಟ್ಟದ ಸಮಿತಿಯ ದಿನಾಂಕ 20–9–2011ರಂದು ಜರುಗಿದ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಹೇಮಾವತಿ ಮತ್ತು ಯಗಚಿ ಯೋಜನೆಗಳಡಿಯಲ್ಲಿ ಶೀತಪೀಡಿತವಾಗಿರುವುದೆಂದು ಹೇಳಲಾದ ಹಲವು ಗ್ರಾಮಗಳನ್ನು ಗುರುತಿಸಿ ಸ್ಥಳಾಂತರಿಸಲು ಆದೇಶಿಸಲಾಗಿದೆ. ಹೇಮಾವತಿ ಮತ್ತು ಯಗಚಿ ಯೋಜನೆಗಳು ಪೂರ್ಣಗೊಂಡು ಹಲವು ವರ್ಷಗಳಾದರೂ ಗ್ರಾಮಗಳು ಇನ್ನು ಶೀತಪೀಡಿತವಾಗಿವೆಯೆಂದು ಅವುಗಳನ್ನು ಸ್ಥಳಾಂತರಿಸಬೇಕೆಂದು ಕೋರಿಕೆಗಳು ಬಂದಿರುತ್ತವೆ. ಈ ಹಿನ್ನೆಲೆಯಲ್ಲಿ, ಹೇಮಾವತಿ ಮತ್ತು ಯಗಚಿ ಯೋಜನೆಯಡಿಯಲ್ಲಿ ಶೀತಪೀಡತವಾಗಿರುವುದೆಂದು ಹೇಳಲಾಗಿರುವ ಗ್ರಾಮಗಳ ಸ್ಥಳ ತನಿಖೆ ಕೈಗೊಂಡು ಶೀತಪೀಡಿತವಾಗುವುದನ್ನು ತಡೆಗಟ್ಟಲು ತಾಂತ್ರಿಕವಾಗಿ ಸಾಧ್ಯವಿಲ್ಲವೇ ಎಂಬ ಬಗ್ಗೆ ಹಾಗೂ ಶೀತಪೀಡಿತವಾಗುವುದನ್ನು ತಡೆಗಟ್ಟಲು ಸಾಧ್ಯವಿಲ್ಲದಿದ್ದಲ್ಲಿ ಗ್ರಾಮ ಸ್ಥಳಾಂತರಕ್ಕೆ ಶಿಫಾರಸ್ಸು ಮಾಡಲು ಪ್ರಾದೇಶಿಕ ಆಯುಕ್ತರು, ಮೈಸೂರು ಇವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ರಚಿಸಲಾಗಿದೆ. ಈ ಸಮಿತಿಯು ಗ್ರಾಮ ಸ್ಥಳಾಂತರಕ್ಕೆ ಈಗಾಗಲೇ ಆದೇಶವಾಗಿರುವ ಹಾಗೂ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದಿರುವ ಗ್ರಾಮಗಳನ್ನು ಮತ್ತು ಹೊಸದಾಗಿ ಸ್ಥಳಾಂತರಕ್ಕೆ ಬೇಡಿಕೆ ಬಂದಿರುವ ಗ್ರಾಮಗಳನ್ನು ಸಹಾ ಸ್ಥಳ ತನಿಖೆ ಮಾಡಿ ವರದಿ ನೀಡಲು ತಿಳಿಸಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ನಡವಳಿಯಂತೆ, ಪ್ರಾದೇಶಿಕ ಆಯುಕ್ತರು, ಮೈಸೂರು ಇವರು ದಿನಾಂಕ 20–9–2011ರಂದು ಉನ್ನತಮಟ್ಟದ ಸಮಿತಿಯ ಸಭೆ ನಡೆಸಿ ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಕಟ್ಟೆಬೆಳಗುಲಿ ಹಾಗೂ ಕಟ್ಟೆಬೆಳಗುಲಿ ಕೊಪ್ಪಲು ಗ್ರಾಮಗಳು ಶೀತಪೀಡಿತವಾಗಿರುವುದಿಲ್ಲ ಹಾಗೂ ಇದನ್ನು ಸ್ಥಳಾಂತರಿಸುವ ಅವಶ್ಯಕತೆಯಿಲ್ಲ ಎಂದು ಶಿಫಾರಸ್ಸು ಮಾಡಿರುತ್ತದೆ.

ಮೇಲೆ ತಿಳಿಸಿರುವ ವಿವರಗಳ ಪ್ರಕಾರ ಮೈಸೂರು ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿನ ಉನ್ನತಮಟ್ಟದ ಸಮಿತಿ ಶಿಫಾರಸ್ಸಿನಂತೆ ಕಟ್ಟೆಬೆಳಗುಲಿ, ಕಟ್ಟೆಬಳಗುಲಿಕೊಪ್ಪಲು ಗ್ರಾಮಗಳು ಶೀತಪೀಡಿತವಾಗಿರುವುದಿಲ್ಲ. ಈ 02 ಗ್ರಾಮಗಳಲ್ಲಿ ಕೈಗೊಳ್ಳಲಾಗಿದ್ದ ಭೂಸ್ವಾಧೀನ ಪ್ರಕ್ರಿಯೆ ಭೂಸ್ವಾಧೀನ ಕಾಯ್ದೆ ಕಲಂ 6(1)ರ ಅಧಿಸೂಚನೆ ನಂತರ ಅವಾರ್ಡ್ ಅನುಮೋದನೆಯಾಗದೆ ಅಸಿಂಧುಗೊಂಡಿರುತ್ತವೆ. ಈ ಪೈಕಿ ಕಟ್ಟೆಬೆಳಗುಲಿ ಕೊಪ್ಪಲು ಗ್ರಾಮಸ್ಥರು

ರಿಟ್ ಅರ್ಜಿ ಸಂ. 18165–320/2010ರಂತೆ ಮೊಕದ್ದಮೆ ದಾಖಲಿಸಿದ್ದು, ಉಚ್ಚ ನ್ಯಾಯಾಲಯವು ದಿನಾಂಕ 15–7–2010ರಂದು ತೀರ್ಪು ನೀಡಿರುತ್ತದೆ. ಈ ತೀರ್ಪಿನ ಮೇಲೆ ಸರ್ಕಾರವು ಮೇಲ್ಮನವಿ ಸಲ್ಲಿಸಿರುತ್ತದೆ.

ಉನ್ನತ ಮಟ್ಟದ ಸಮಿತಿಯ ವರದಿಯ ಪ್ರಕಾರ ಮೇಲೆ ತಿಳಿಸಿದ 02 ಗ್ರಾಮಗಳು ಶೀತಪೀಡಿತವಾಗಿಲ್ಲದಿರುವುದರಿಂದ ಹಾಗೂ ಶೀತಪೀಡಿತವಾಗುವುದನ್ನು ತಾಂತ್ರಿಕವಾಗಿ ತಡೆಗಟ್ಟಲು ಸಾಧ್ಯವಿರುವುದರಿಂದ ಈ ಗ್ರಾಮಗಳ ಸ್ಥಳಾಂತರವನ್ನು ಕೈಬಿಡಲು ನಿರ್ಧರಿಸಲಾಗಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 01, ಭೂಸ್ವಾಹ 2011, ಬೆಂಗಳೂರು, ದಿನಾಂಕ 21–12–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಮೈಸೂರು ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿನ ಉನ್ನತಾಧಿಕಾರ ಸಮಿತಿಯು ನೀಡಿದ ಶಿಫಾರಸ್ಸನ್ನು ಒಪ್ಪಿ ಸರ್ಕಾರದ ಆದೇಶ ಸಂಖ್ಯೆ: ಕಂಇ 120 ಆರ್‌ಇಹೆಚ್ 92 (ಭಾಗ) ದಿನಾಂಕ 15–4–1999 ರನ್ವಯ ಹೇಮಾವತಿ ಹಾಗೂ ಯಗಚಿ ಯೋಜನೆಗಳಡಿಯಲ್ಲಿ ಬರುವಂತಹ ಈ ಕೆಳಕಂಡ ಗ್ರಾಮಗಳು ಶೀತಪೀಡಿತವಾಗಿಲ್ಲದಿರುವುದರಿಂದ ಅವುಗಳನ್ನು ಸ್ಥಳಾಂತರಿಸುವ ಅಗತ್ಯವಿಲ್ಲವೆಂದು ತೀರ್ಮಾನಿಸಿ ಆದೇಶಿಸಿದೆ.

1) ಕಟ್ಟೆಬೆಳಗುಲಿ
2) ಕಟ್ಟೆಬೆಳಗುಲಿ ಕೊಪ್ಪಲು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ. ವೆಂಕಟೇಶಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಸ್ವಾಧೀನ 1 ಮತ್ತು 3)

ಪಿ.ಆರ್. 226

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಅಬ್ಬಿಗೆರೆ ಗ್ರಾಮ ಸರ್ವೆ ನಂ. 13ರ ಸರ್ಕಾರಿ ಜಮೀನಿಗೆ ಅಕ್ರಮ ದಾಖಲೆ ಸೃಷ್ಟಿಸಿರುವ ಪ್ರಕರಣವನ್ನು ಮಾನ್ಯ ಲೋಕಾಯುಕ್ತರಿಗೆ ವಹಿಸುವ ಕುರಿತು.

ಓದಲಾಗಿದೆ: 1) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ: ಆರ್‌ಆರ್‌ಟಿ (1) ಎಸ್‌ಸಿಆರ್: 154/10–11, ದಿನಾಂಕ 11–07–2011.
2) ಸಂಖ್ಯೆ: ಆರ್‌ಆರ್‌ಟಿ (ಎನ್) ಸಿಆರ್ 154/10–11, ದಿನಾಂಕ 18–11–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ.(1) ದಿನಾಂಕ 11–07–2011ರ ಪತ್ರದಲ್ಲಿ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಅಬ್ಬಿಗೆರೆ ಗ್ರಾಮದ ಸರ್ವೆ ನಂ. 13ರಲ್ಲಿ 3 ಎಕರೆ 18 ಗುಂಟೆ ಸರ್ಕಾರಿ ಗೋಮಾಳ ಜಮೀನನ್ನು ಶ್ರೀ ವೆಂಕಟಾಚಲಯ್ಯ ಬಿನ್ ಮಹೇಶ್ವರಪ್ಪ, ಕೃಷ್ಣಪ್ಪ ಬಿನ್ ಕೆಂಪಯ್ಯ, ದಾಸೇಗೌಡ ಬಿನ್ ಕೃಷ್ಣಪ್ಪ ಈ ಮೂರು ಜನರಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಮತ್ತು ಉಪ ವಿಭಾಗಾಧಿಕಾರಿಗಳ ಆದೇಶದಂತೆ ದರಖಾಸ್ತು ಮೂಲಕ ಮಂಜೂರಾದಂತೆ ಎಂ.ಆರ್. ನ ಅಂಗೀಕರಿಸಿರುವ ಬಗ್ಗೆ ಇರುತ್ತದೆ. ಆದರೆ ವಾಸ್ತವಿಕವಾಗಿ ಪ್ರಶ್ನಿತ ಜಮೀನು ಸರ್ಕಾರಿ ಜಮೀನಾಗಿದ್ದು, ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಯವರ ಹೆಸರಿಗೆ ಮತ್ತು ಉಪವಿಭಾಗಾಧಿಕಾರಿಗಳ ಹೆಸರಿನಲ್ಲಿ ನಕಲು ದಾಖಲೆ ಸೃಷ್ಟಿಸಿ ಮುಟೇಷನ್ ಅಂಗೀಕರಿಸಿರುವ ಬಗ್ಗೆ ಪ್ರಕರಣ ಸಂಬಂಧಿಸಿದ್ದಾಗಿರುತ್ತದೆ. ಪ್ರಶ್ನಿತ ಜಮೀನು ಸರ್ಕಾರಿ ಜಮೀನೆಂದು ವಿವಿಧ ನ್ಯಾಯಾಲಯಗಳಲ್ಲಿ ಪ್ರಶ್ನಿಸಲಾಗಿದ್ದು ಸರ್ಕಾರದ ಪರವಾಗಿ ಸಮರ್ಪಕವಾಗಿ ದಾಖಲೆ, ಆಧಾರ, ಸಾಕ್ಷಿ ಇತ್ಯಾದಿಗಳನ್ನು ಒದಗಿಸುವಲ್ಲಿ ವಿಫಲರಾಗಿರುವುದರಿಂದ ನ್ಯಾಯಾಲಯದಲ್ಲಿ ಸರ್ಕಾರದ ವಿರುದ್ಧವಾಗಿ ತಿರ್ಮಾನ ಬಂದಿದ್ದು ಪ್ರಸ್ತುತ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ಸಲ್ಲಿಸಲಾಗಿರುತ್ತದೆ. ಈ ಪ್ರಶ್ನಿತ ಜಮೀನು ಬೆಂಗಳೂರು ನಗರದ ಹೃದಯ ಭಾಗದಲ್ಲಿದ್ದು, ಅತ್ಯಂತ ಬೆಲೆ ಬಾಳುವ ಜಮೀನು ಆಗಿರುವುದರಿಂದ ಇಂತಹ ಜಮೀನಿಗೆ ಖೊಟ್ಟೆ ದಾಖಲೆಗಳನ್ನು ಸೃಷ್ಟಿಸಿ ಮತ್ತು ವಿವಿಧ ನ್ಯಾಯಾಲಯಗಳಲ್ಲಿ ಅವಶ್ಯಕವಿರುವ ಮಾಹಿತಿಗಳನ್ನು ಒದಗಿಸದೇ ಸರ್ಕಾರದ ಜಮೀನು ಕೈತಪ್ಪಿ ಹೋಗುವಂತೆ ನಿರ್ಮಾಣ ಮಾಡಿದಂತಹ ಕಂದಾಯ ಇಲಾಖೆಯ ಸಿಬ್ಬಂದಿ/ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವ ನಿಟ್ಟಿನಲ್ಲಿ ಪರಿಶೀಲಿಸುವಂತೆ ಬೆಂಗಳೂರ ನಗರ ಜಿಲ್ಲೆಯ ಜಿಲ್ಲಾಧಿಕಾರಿಯವರು ಶಿಫಾರಸ್ಸು ಮಾಡಿರುತ್ತಾರೆ.

ಮುಂದುವರೆದು, ಮೇಲೆ ಓದಲಾದ ಕ್ರ.ಸಂ.(2) ದಿನಾಂಕ 18–11–2011ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಇವರು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಅಬ್ಬಿಗೆರೆ ಗ್ರಾಮ ಸರ್ವೆ ನಂ. 13ರ ಸರ್ಕಾರಿ ಜಮೀನಿಗೆ ಅಕ್ರಮ ದಾಖಲೆ ಸೃಷ್ಟಿಸಿ ಖಾತೆ ಮಾಡಿಕೊಂಡಿರುವ ಶ್ರೀ ವೆಂಕಟಾಚಲಯ್ಯ ಬಿನ್ ಲೇಟ್ ಮಹೇಶ್ವರಪ್ಪ, ಕೃಷ್ಣಪ್ಪ ಬಿನ್ ಲೇಟ್ ಕೆಂಪಯ್ಯ, ಪಾಪೇಗೌಡ ಬಿನ್ ಕೃಷ್ಣಪ್ಪ ಹಾಗೂ ಕಂದಾಯ ಇಲಾಖೆ ಸಿಬ್ಬಂದಿಗಳಾದ ಶ್ರೀ ಕೆ. ಶಿವಲಿಂಗಯ್ಯ, ಹಿಂದಿನ ಹೆಚ್ಚುವರಿ ಶಿರಸ್ತೇದಾರ ಮತ್ತು ಸಿದ್ದರಾಜು, ಹಿಂದಿನ ಗ್ರಾಮಲೆಕ್ಕಾಧಿಕಾರಿಗಳು ಇವರುಗಳ ವಿರುದ್ಧ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ಇವರ ಪತ್ರ ಸಂಖ್ಯೆ: ಆರ್‌ಆರ್‌ಟಿ(ವೈ) ಸಿಆರ್ 698/07–08, ದಿನಾಂಕ 03–11–2011ರ ಪತ್ರದಲ್ಲಿ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿರುವ ಎಫ್.ಐ.ಆರ್. ಪ್ರತಿ ಕಳುಹಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಪ್ರಕರಣವನ್ನು ವಿಚಾರಣೆ ನಡೆಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ–1994 ಕಲಂ 7(2)(ಎ) ರನ್ವಯ ಮಾನ್ಯ ಲೋಕಾಯುಕ್ತರಿಗೆ ವಹಿಸಲು ನಿರ್ಧರಿಸಿರುವುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 68 ಎಡಿಇ 2011, ಬೆಂಗಳೂರು, ದಿನಾಂಕ 18–12–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಅಬ್ಬಿಗೆರೆ ಗ್ರಾಮ ಸರ್ವೆ ನಂ. 13ರ ಸರ್ಕಾರಿ ಜಮೀನಿಗೆ ಅಕ್ರಮ ದಾಖಲೆ ಸೃಷ್ಟಿಸಿರುವ ಕಂದಾಯ ಇಲಾಖೆಯ ಸಿಬ್ಬಂದಿಗಳಾದ ಶ್ರೀ ಕೆ. ಶಿವಲಿಂಗಯ್ಯ, ಹಿಂದಿನ ಹೆಚ್ಚುವರಿ ಶಿರಸ್ತೇದಾರ್ ಮತ್ತು ಶ್ರೀ ಸಿದ್ದರಾಜು, ಹಿಂದಿನ ಗ್ರಾಮ ಲೆಕ್ಕಾಧಿಕಾರಿ ಇವರುಗಳ ವಿರುದ್ಧ ವಿಚಾರಣೆ ನಡೆಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ–1994 ಕಲಂ 7(2)(ಎ) ರನ್ವಯ ಮಾನ್ಯ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್. ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. 227

ಕಂದಾಯ ಸಚಿವಾಲಯ

ವಿಷಯ : ದಿ: ರಮೇಶ್ ಪಡುವಳ್‌ಕರ್, ಹಿಂದಿನ ತಹಶೀಲ್ದಾರ್, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ (ನಿವೃತ್ತ) ಇವರ ವಿರುದ್ಧ ಇಲಾಖಾ ವಿಚಾರಣೆ ಕೈಬಿಡುವ ಬಗ್ಗೆ.

ಓದಲಾಗಿದೆ:
1) ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರ ಪತ್ರ ಸಂಖ್ಯೆ: ಡಿಡಿಎಸ್ ಇಎಸ್‌ಟಿ(1)/ಸಿಆರ್/6/2001–02, ದಿನಾಂಕ 10–05–2002.
2) ಕಾರಣ ಕೇಳುವ ನೋಟೀಸು ಸಂಖ್ಯೆ: ಆರ್‌ಡಿ 05 ಎಡಿಇ 2003, ದಿನಾಂಕ 08–05–2003.
3) ಶ್ರೀ ರಮೇಶ್ ಪಡುವಳ್‌ಕರ್, ತಹಶೀಲ್ದಾರ್ ಇವರ ಲಿಖಿತ ಸಮಜಾಯಿಷಿ, ದಿನಾಂಕ 31–05–2003.
4) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 17 ಎಡಿಇ 2004, ದಿನಾಂಕ 19–05–2004
5) ವಿಚಾರಣಾಧಿಕಾರಿಗಳ ವರದಿ ದಿನಾಂಕ 19–08–2004
6) ಎರಡನೇ ಕಾರಣ ಕೇಳುವ ನೋಟೀಸು ಸಂಖ್ಯೆ: ಆರ್‌ಡಿ 17 ಎಡಿಇ 2004, ದಿನಾಂಕ 27–07–2009.
7) ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರ ಪತ್ರ ಸಂಖ್ಯೆ: ಎಡಿಎಂ/ಸಿಆರ್/87/2008–09, ದಿನಾಂಕ 02–03–2010.
8) ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರ ಪತ್ರ ಸಂಖ್ಯೆ: ಇಎಸ್‌ಟಿ(1)ಸಿಆರ್. 44102–03/12212/ಎ1, ದಿನಾಂಕ 13–06–2011.

ಪ್ರಸ್ತಾವನೆ :

ಶ್ರೀ ರಮೇಶ್ ಪಡುವಳ್‌ಕರ್, ಹಿಂದಿನ ತಹಶೀಲ್ದಾರ್, ಕಾರ್ಕಳ ತಾಲ್ಲೂಕು ಇವರು ಕಾರ್ಕಳ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಕಾರ್ಕಳ ತಾಲ್ಲೂಕು, ಅಜಿಕಾರು ಹೋಬಳಿ, ವರಂಗ ಗ್ರಾಮದ ಸ.ನಂ. 38/ಬಿ2 ರಲ್ಲಿ ಪುಂಜ 4–60 ಎಕರೆ ಖಾತೆ ಬದಲಾವಣೆಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ನಡೆಸಿ ಮರು ತನಿಖೆ ಆದೇಶ ಹೊರಡಿಸಬೇಕೆಂದು ಕುಂದಾಪುರ ಸಹಾಯಕ ಕಮೀಷನರ್ ರವರು ಆದೇಶ ಸಂಖೆ: ಸಿಡಿಎಸ್/ಆರ್‌ಆರ್‌ವಿ/ಎಸ್‌ಅರ್(3)/18/98–99, ದಿನಾಂಕ 16–12–1999 ರಲ್ಲಿ ತಿಳಿಸಿದ್ದರೂ ಸಹ ಅವರು ಸ್ಥಳ ತನಿಖೆ ಮಾಡದೇ ಖಾತೆ ಬದಲಾವಣೆ ಮಾಡಿ ಮೇಲಾಧಿಕಾರಿಯವರ ಆದೇಶವನ್ನು ಉಲ್ಲಂಘಿಸಿ, ನಿಯಮಗಳನ್ನು ಗಾಳಿಗೆ ತೂರಿ ಕರ್ತವ್ಯಲೋಪಗಳನ್ನು ಎಸಗಿರುತ್ತಾರೆಂದು ಸರ್ಕಾರಕ್ಕೆ ಮೇಲೆ ಓದಲಾದ ಕ್ರಮ ಸಂಖ್ಯೆ(1) ದಿನಾಂಕ 10–05–2005ರ ಪತ್ರದ ಪ್ರಸ್ತಾವನೆಯಲ್ಲಿ ಉಡುಪಿ ಜಿಲ್ಲಾಧಿಕಾರಿಗಳು ಆರೋಪಿತರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಆರೋಪ ಪಟ್ಟಿಗಳನ್ನು ಲಗತ್ತಿಸಿ, ಪ್ರಸ್ತಾವನೆಯನ್ನು ಸಲ್ಲಿಸಿದ್ದರು.

ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಪರಿಶೀಲಿಸಿ, ಕ್ರ.ಸಂ. (2)ರ ದಿನಾಂಕ 08–05–2003 ರಲ್ಲಿ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11ರ ಮೇರೆಗೆ ಆರೋಪಿತ ಅಧಿಕಾರಿಗಳ ವಿರುದ್ಧ ಆರೋಪ ಪಟ್ಟಿಗಳನ್ನು ಜಾರಿ ಮಾಡಲಾಗಿತ್ತು. ಸದರಿ ಆರೋಪಿತ ಅಧಿಕಾರಿಗಳು ಮೇಲೆ ಓದಲಾದ ಕ್ರ.ಸಂ. (3)ರ ದಿನಾಂಕ 31–05–2003ರಲ್ಲಿ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿ, ತಮ್ಮ ವಿರುದ್ಧದ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತದೆಂದು ತಿಳಿಸಿ, ಆರೋಪಗಳನ್ನು ಅಲ್ಲಗಳೆದಿದ್ದರಿಂದ ಆರೋಪಿತರ ವಿರುದ್ಧ ಆರೋಪಗಳು ಹಾಗೂ ಅವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ ಈ ಪ್ರಕರಣದ ಸತ್ಯಾ ಸತ್ಯತೆಯನ್ನು ಕಂಡುಕೊಳ್ಳಲು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳಡಿಯಲ್ಲಿ ಇಲಾಖೆ ವಿಚಾರಣೆ ಜರುಗಿಸಲು ಶ್ರೀ ಎನ್. ಎಸ್. ಸಂಗೊಳ್ಳಿ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯ ಕೇಂದ್ರ ಸ್ಥಾನಿಕ ಸಹಾಯಕರನ್ನು ಮಂಡನಾಧಿಕಾರಿಯನ್ನಾಗಿ ಮೇಲೆ ಓದಲಾದ ಕ್ರ.ಸಂ. (4)ರ ದಿನಾಂಕ 19–05–2004ರ ಅದೇಶದಲ್ಲಿ ನೇಮಿಸಲಾಗಿತ್ತು.

ಅದರಂತೆ, ಮೇಲೆ ಓದಲಾದ ಕ್ರ.ಸಂ. (5)ರ ದಿನಾಂಕ 19–08–2004ರಲ್ಲಿ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ನು ಪರಿಶೀಲಿಸಲಾಗಿ "ಸಹಾಯಕ ಆಯುಕ್ತರು ದಾಖಲೆಗಳು ಸರಿಯಾಗಿ ಇರದೇ ಇದ್ದಲ್ಲಿ ಅಂದರೆ, ಅಗತ್ಯವಿದ್ದಲ್ಲಿ ಸ್ಥಳ ತನಿಖೆ ಮಾಡಲು ಆದೇಶಿಸಿರುತ್ತಾರೆ. ಆದರೆ, ಆರೋಪಿತ ಅಧಿಕಾರಿಗಳು ದಾಖಲೆಗಳು ಕಛೇರಿಯಲ್ಲಿ ಇರುತ್ತವೆ, ಸ್ಥಳದಲ್ಲಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಅಲ್ಲದೆ, ಅರ್ಜಿದಾರರ ಹಿನ್ನೆಲೆಯನ್ನು ತಿಳಿದುಕೊಂಡೇ ಅವಶ್ಯವಾದ, ಅಗತ್ಯವಾದ ಮರುಪರಿಶೀಲನೆ ಮಾಡದೇ, ಸ್ಥಳ ಪರೀಕ್ಷೆ ಮಾಡದೇ ಮಾಡಿದ್ದು ಸ್ಪಷ್ಟವಾಗುತ್ತದೆ. ಹೀಗೆ ಸಹಾಯಕ ಆಯುಕ್ತರ ಆದೇಶದ ಪೂರ್ಣ ಅರ್ಥ ಮಾಡಿಕೊಂಡು ಈ ರೀತಿ ವ್ಯತ್ಯಾಸವಾಗಿ, ಕಾನೂನು ವಿರುದ್ಧವಾಗಿ ನಡೆದುಕೊಂಡು ಅವರ ಆದೇಶವನ್ನು ತಿಳಿದು ತಿಳಿದೂ ಉಲ್ಲಂಘಿಸಿದ್ದು ಸ್ಪಷ್ಟವಾಗುತ್ತದೆ. ಕಾರಣ ಹೆಚ್ಚಿನ ಚರ್ಚೆ ಮಾಡದೆ ಆಪಾದಿತರ ವಿರುದ್ಧ ಮಾಡಲಾದ ಆಪಾದನೆಯನ್ನು ರುಜುವಾತು ಪಡಿಸಲಾಗಿದೆ ಎಂದು ನಿರ್ಣಯಿಸಲಾಗಿದೆ" ಎಂದು ವರದಿ ನೀಡಿರುತ್ತಾರೆ.

ವಿಚಾರಣಾ ವರದಿಯ ಹಿನ್ನೆಲೆಯಲ್ಲಿ ಆಪಾದಿತ ಅಧಿಕಾರಿಯ ನಿವೃತ್ತ ವೇತನದಿಂದ ಪ್ರತಿ ತಿಂಗಳೂ ರೂ. 500–00 ಗಳನ್ನು ಕಡಿತಗೊಳಿಸುವ ದಂಡನೆ ವಿಧಿಸಲು ತೀರ್ಮಾನಿಸಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ದಿನಾಂಕ 03–11–2008 ರಂದು ಪತ್ರ ಬರೆಯಲಾಗಿತ್ತು. ಆದರೆ, ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ 05–03–2009ರ ಪತ್ರದಲ್ಲಿ ಇಲಾಖಾ ವಿಚಾರಣೆ ಸಾಬೀತಾದ ಆರೋಪಕ್ಕೆ ದಂಡನೆ ವಿಧಿಸುವ ಮುನ್ನ ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್‌ಡಿ 10 ಎಸ್‌ಆರ್‌ಎಸ್ 04, ದಿನಾಂಕ 16–06–2004ರ ಪ್ರಕಾರ ಆಪಾದಿತರಿಗೆ ವಿಚಾರಣಾ ವರದಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸು ಜಾರಿ ಮಾಡುವುದು ಅತ್ಯಾವಶ್ಯಕ. ಆದ್ದರಿಂದ ಆಪಾದಿತ ಅಧಿಕಾರಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿ ಅವರಿಂದ ಅಂತಿಮ ರಕ್ಷಣಾ ಹೇಳಿಕೆಯನ್ನು ಪಡೆದು ನಂತರ ಆಯೋಗದ ಸಹಮತಿ ಕೋರಬಹುದಾಗಿದೆ ಎಂದು ತಿಳಿಸಿದ್ದರಿಂದ ಮೇಲೆ ಓದಲಾದ ಕ್ರ.ಸಂ. (6)ರ ದಿನಾಂಕ 22–07–2009 ರಲ್ಲಿ ವಿಚಾರಣಾ ವರದಿಯ ಬಗ್ಗೆ ಏನಾದರೂ ಸಮಜಾಯಿಷಿ ಇದ್ದಲ್ಲಿ ಲಿಖಿತ ಹೇಳಿಕೆ ಸಲ್ಲಿಸುವಂತೆ ಆರೋಪಿತ ಅಧಿಕಾರಿಗಳಿಗೆ ಎರಡನೇ ಕಾರಣ ಕೇಳುವ ನೋಟೀಸು ಜಾರಿ ಮಾಡಲಾಗಿತ್ತು. ಆದರೆ, ಸದರಿ ಎರಡನೇ ಕಾರಣ ಕೇಳುವ ನೋಟೀಸು ಸ್ವೀಕರಿಸುವ ಮೊದಲೇ ಆರೋಪಿತ ಅಧಿಕಾರಿಗಳು ಮರಣ ಹೊಂದಿರುತ್ತಾರೆಂದು ಮೇಲೆ ಓದಲಾದ ಕ್ರ.ಸಂ. (7)ರ ದಿನಾಂಕ 02–03–2010ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರು ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ, ಅಂದರೆ ಆರೋಪಿತ ಅಧಿಕಾರಿಯು ಮೃತಪಟ್ಟಿರುವುದರಿಂದ, ಅವರಿಂದ ಸರ್ಕಾರಕ್ಕೆ ಏನಾದರೂ ಆರ್ಥಿಕ ನಷ್ಟ ಉಂಟಾಗಿದೆಯೇ ಎಂಬ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರನ್ನು ದಿನಾಂಕ 03–09–2010ರ ಅರೆ ಸರ್ಕಾರಿ ಪತ್ರದಲ್ಲಿ ಕೋರಲಾಗಿತ್ತು.

ಇದಕ್ಕೆ ಉತ್ತರವಾಗಿ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ದಿನಾಂಕ 22–11–2010ರ ಪತ್ರದಲ್ಲಿ ದಿವಂಗತ ರಮೇಶ್ ಪಡುವಳಕರ್ ಹಿಂದಿನ ತಹಶೀಲ್ದಾರರು, ಕಾರ್ಕಳ ತಾಲ್ಲೂಕು ವರಂಗ ಗ್ರಾಮದ ಸ.ನಂ. 38ರ ಸರ್ಕಾರಿ ಜಮೀನಿನ ಪೈಕಿ 4.60 ಎಕರೆ ಜಮೀನಿಗೆ ಸ್ಥಳ ತನಿಖೆ ಮಾಡದೇ ಅಕ್ರಮ ಖಾತೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕಛೇರಿಯಿಂದ ದಿನಾಂಕ 27–07–2001ರ ಪತ್ರದಲ್ಲಿ ವರದಿ ಸಲ್ಲಿಸಿರುವಂತೆ ಶ್ರೀ ಸೀತಾರಾಂ ಕದಂಬರು ತಹಶೀಲ್ದಾರರು ಮಾಡಿದ ಮ್ಯುಟೇಶನ್ ಆದೇಶದ ವಿರುದ್ಧ ಸಹಾಯಕ ಕಮೀಷನರ್ ಕುಂದಾಪುರ ಇವರಿಗೆ ಸಲಿಸಿರುವ ಮೇಲ್ಮನವಿಯು ದಿನಾಂಕ 28–07–2005ರ ಆದೇಶದಂತೆ ವಜಾಗೊಳಿಸಲಾಗಿದೆ. ಈ ಪ್ರಕರಣವು ಜಮೀನಿನ ಖಾತೆ ಬದಲಾವಣೆಗೆ ಸಂಬಂಧಿಸಿದ್ದು ದಿ॥ ರಮೇಶ್ ಪಡುವಳಕರ್ ಇವರಿಂದ ಸರ್ಕಾರಕ್ಕೆ ನಷ್ಟ ಉಂಟಾಗಿರುವುದಿಲ್ಲ ಎಂದು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 10 ಸೇನಿಇ 2003, ದಿನಾಂಕ 12–11–2003 ರನ್ವಯ ಸದರಿ ಪ್ರಕರಣವನ್ನು ಪರಿಶೀಲಿಸಿ ಆರೋಪಿತ ಅಧಿಕಾರಿಗಳ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಡಲು ನಿರ್ಧರಿಸಿರುವುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 17 ಎಡಿಇ 2004, ಬೆಂಗಳೂರು, ದಿನಾಂಕ 12–12–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿ॥ ರಮೇಶ್ ಪಡುವಳ್ಕರ್ , ಹಿಂದಿನ ತಹಶೀಲ್ದಾರ್, ಕಾರ್ಕಳ (ನಿವೃತ್ತ) ಇವರ ವಿರುದ್ಧ ಹೂಡಲಾದ ಇಲಾಖಾ ವಿಚಾರಣೆಯನ್ನು ಕೈಬಿಟ್ಟು ಆದೇಶಿಸಿದೆ.

ಸದರಿ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ, ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿದ್ದರೋ ಆ ಸೌಲಭ್ಯಗಳನ್ನು ಸದರಿಯವರು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಗೋಪಾಲಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 228 ಕಂದಾಯ ಇಲಾಖೆ (ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ವಾಟರ್ ಟ್ಯಾಂಕರ್ ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಪಾವತಿಸುವ ಬಗ್ಗೆ.

ಓದಲಾಗಿದೆ:
1) ಬೆಳಗಾವಿ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಕಂಶಾ/ಭೂಸ್ವಾ/ಮಿ/ವಿವ–172/2010–11, ದಿನಾಂಕ 31–10–2011.
2) ಬಾಗಲಕೋಟೆ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಸಿಎಎಲ್/ಸಿಆರ್–06/2010–11, ದಿನಾಂಕ 18–10–2011.
3) ಗದಗ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಪುನರ್ವಸತಿ:ಸಿಆರ್–62/2011–12, ದಿನಾಂಕ 18–10–2011.

ಪ್ರಸ್ತಾವನೆ :

ಬೆಳಗಾವಿ, ಬಾಗಲಕೋಟೆ ಮತ್ತು ಗದಗ ಜಿಲ್ಲಾಧಿಕಾರಿಗಳ ಮೇಲೆ ಓದಲಾದ (1) ರಿಂದ (3)ರವರೆಗಿನ ಪತ್ರಗಳಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುತ್‌ಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಮತ್ತು ಆಸರೆ ಮನೆಗಳ ನಿರ್ಮಾಣಕ್ಕೆ ವಾಟರ್ ಟ್ಯಾಂಕರ್ ಮೂಲಕ ನೀರನ್ನು ಒದಗಿಸಲಾಗಿರುತ್ತದೆ. ಆದುದರಿಂದ, ಈ ಡೀಸಲ್ ಜನರೇಟರ್‌ನ ಬಾಡಿಗೆ ಹಣ ಬೆಳಗಾಂ ಜಿಲ್ಲಾಧಿಕಾರಿಗಳು ರೂ. 7,33,800/– ಬಾಗಲಕೋಟೆ ಜಿಲ್ಲಾಧಿಕಾರಿಗಳು ರೂ. 2,44,960/– ಮತ್ತು ಗದಗ ಜಿಲ್ಲಾಧಿಕಾರಿಗಳು ಡೀಸಲ್ ಜನರೇಟರ್ ಮತ್ತು ವಾಟರ್ ಟ್ಯಾಂಕರ್ ಬಾಬ್ತು ರೂ. 12,19,680/– ಒಟ್ಟು ರೂ 21,98,440/–ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 400 ಟಿಎನ್‌ಆರ್ 2010, ಬೆಂಗಳೂರು, ದಿನಾಂಕ 12–12–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭದ ಹಿನ್ನಲೆಯಲಿ ಆಸರೆ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಡೀಸಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಮತ್ತು ವಾಟರ್ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿದ ಬಾಬ್ತನ್ನು ಬೆಳಗಾವಿ, ಬಾಗಲಕೋಟೆ ಮತ್ತು ಗದಗ ಜಿಲ್ಲಾಧಿಕಾರಿಗಳಿಗೆ ಈ ಕೆಳಗಿನಂತೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರ.ಸಂ.	ಜಿಲ್ಲೆಗಳು	ಬಿಡುಗಡೆ ಮಾಡಿದ ಮೊತ್ತ (ರೂ. ಗಳಲ್ಲಿ)
1	ಬೆಳಗಾವಿ	7,33,800/–
2	ಬಾಗಲಕೋಟೆ	2,44,960/–
3	ಗದಗ	12,19,680/–
	ಒಟ್ಟು	**21,98,440/–**

(ರೂಪಾಯಿ ಇಪ್ಪತ್ತೊಂದು ಲಕ್ಷದ ತೊಂಬತ್ತೆಂಟು ಸಾವಿರದ ನಾಲ್ಕು ನೂರ ನಲವತ್ತು ಮಾತ್ರ)

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 8235–00–111–0–02 "Public contributions to the calamity relief" ಅಡಿಯಲಿ ಭರಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಡ್ರಾ ಮಾಡಲು ಪೇಯೀಸ್ ರಸೀದಿ (ಸಿಟಿಎಸ್–8) ಬಿಲ್ಲು ತಯಾರಿಸಿ, ಮೇಲು ಸಹಿ ಮಾಡಿ ಖಜಾನೆಗೆ ಸಲ್ಲಿಸಲು ಸೂಚಿಸಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಹಣ ಬಳಕೆ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು. ಬಿಡುಗಡೆ ಮಾಡಿರುವ ಹಣವನ್ನು ಹೇಗೆ ಉಪಯೋಗಿಸಲಾಗಿದೆ ಮತ್ತು ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ಎಂ. ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ. ಮತ್ತು ಸೇವೆಗಳು–2)

ಪಿ.ಆರ್. 229

ಕಂದಾಯ ಸಚಿವಾಲಯ

ವಿಷಯ : ಶ್ರೀ ಆರ್. ಅನಿಲ್ ಕುಮಾರ್, ತಹಶೀಲ್ದಾರ್, ನೆಲಮಂಗಲ ತಾಲ್ಲೂಕು ಇವರ ಹಿಂದಿನ ಸೇವೆಯನ್ನು ಪರಿಗಣಿಸುವ ಕುರಿತು.

ಓದಲಾಗಿದೆ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 51 ಎಎಸ್‌ಡಿ 2008, ದಿನಾಂಕ 23–05–2008.
2) ಶ್ರೀ ಅನಿಲ್ ಕುಮಾರ್ ಇವರ ಪತ್ರ ದಿನಾಂಕ 11–06–2008

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ 11–06–2008ರ ಅಧಿಸೂಚನೆಯನ್ವಯ ಶ್ರೀ ಆರ್. ಅನಿಲ್ ಕುಮಾರ್, ತಹಶೀಲ್ದಾರ್, ನೆಲಮಂಗಲ ತಾಲ್ಲೂಕು ಇವರು ಕಂದಾಯ ಇಲಾಖೆಯ ತಹಶೀಲ್ದಾರ್, ಗುಂಪು–ಬಿ ಹುದ್ದೆಗೆ ನೇಮಕಗೊಂಡಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ 11–06–2008ರ ಪತ್ರದಲ್ಲಿ ಸದರಿಯವರು, ಕಂದಾಯ ಇಲಾಖೆಯಲ್ಲಿ ಸೇವೆ ಪ್ರಾರಂಭಿಸುವ ಪೂರ್ವದಲ್ಲಿ ಅರಣ್ಯ ಇಲಾಖೆಯಲ್ಲಿ ವನಪಾಲಕರಾಗಿ ದಿನಾಂಕ 07–05–2004 ರಿಂದ ಸಲ್ಲಿಸಿರುವ ಸೇವೆಯನ್ನು ನಿವೃತ್ತಿ ವೇತನ ಸೌಲಭ್ಯಗಳಿಗೆ ಪರಿಗಣಿಸುವಂತೆ ಕೋರಿರುತ್ತಾರೆ.

ಶ್ರೀಯುತರ ಮನವಿಯನ್ನು ಹಾಗೂ ಅವರ ಸೇವಾ ಪುಸ್ತಕವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಶ್ರೀ ಆರ್. ಅನಿಲ್ ಕುಮಾರ್, ತಹಶೀಲ್ದಾರ್, ನೆಲಮಂಗಲ ತಾಲ್ಲೂಕು ಇವರು ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು ಇವರ ಆದೇಶ ಸಂಖ್ಯೆ: 31/03–04, ದಿನಾಂಕ 19–03–2004 ರನ್ವಯ ದಿನಾಂಕ 07–05–2004 ರಂದು ಅರಣ್ಯ ಇಲಾಖೆಯಲ್ಲಿ ವನಪಾಲಕರಾಗಿ ನೇಮಕಗೊಂಡಿದ್ದು, ನಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ತುಮಕೂರು ಇವರ ಅದೇಶ ಸಂಖ್ಯೆ: ಎ3–ಸಿಬ್ಬಂದಿ–ವೈಕ–ವಿ.ವ–30/2005–06, ದಿನಾಂಕ 06–06–2008 ರನ್ವಯ ದಿನಾಂಕ 07–06–2008 ರಂದು ಸದರಿ ಸೇವೆಯಿಂದ ಬಿಡುಗಡೆ ಹೊಂದಿರುತ್ತಾರೆ.

ಸದರಿಯವರು ತಹಶೀಲ್ದಾರ್ ಹುದ್ದೆಗೆ ಸಮುಚಿತ ಮಾರ್ಗದ ಮೂಲಕ ಅರ್ಜಿ ಸಲ್ಲಿಸಿ, ತಹಶೀಲ್ದಾರ್ ಹುದ್ದೆಗೆ ನೇಮಕಗೊಳ್ಳುವುದಕ್ಕಾಗಿಯೇ ಅರಣ್ಯ ಇಲಾಖೆಯ ಸೇವೆಯಿಂದ ಬಿಡುಗಡೆಗೊಂಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಗಣಿಸಿ, ಶ್ರೀ ಆರ್. ಅನಿಲ್ ಕುಮಾರ್, ತಹಶೀಲ್ದಾರ್, ನೆಲಮಂಗಲ ತಾಲ್ಲೂಕು ಇವರು ಅರಣ್ಯ ಇಲಾಖೆಯಲ್ಲಿ ವನಪಾಲಕರಾಗಿ ದಿನಾಂಕ 07–05–2004 ರಿಂದ ದಿನಾಂಕ 07–06–2008 ರವರೆಗಿನ ಸೇವಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 224 (ಎ) ರನ್ವಯ ಪ್ರಸ್ತುತ ಸೇವೆಗೆ ನಿವೃತ್ತಿ ವೇತನ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ನಿರ್ದರಿಸಿರುವುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 359 ಎಎಸ್‌ಡಿ 2011, ಬೆಂಗಳೂರು, ದಿನಾಂಕ 12–12–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಶ್ರೀ ಆರ್. ಅನಿಲ್ ಕುಮಾರ್, ತಹಶೀಲ್ದಾರ್, ನೆಲಮಂಗಲ ತಾಲ್ಲೂಕು ಇವರು ಈ ಹಿಂದೆ ಅರಣ್ಯ ಇಲಾಖೆಯಲ್ಲಿ ವನಪಾಲಕರಾಗಿ ದಿನಾಂಕ 07–05–2004 ರಿಂದ ದಿನಾಂಕ 07–06–2008 ರವರೆಗೆ ಸಲ್ಲಿಸಿರುವ ಸೇವಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 224 (ಎ) ರನ್ವಯ ಪ್ರಸ್ತುತ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್. ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. 230

ಕಂದಾಯ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ, ರಾಣಿಬೆನ್ನೂರು ಹಾಗೂ ಹಿರೇಕೇರೂರು ತಾಲ್ಲೂಕುಗಳಲ್ಲಿನ ವಿವಿಧ ಸರ್ವೆ ನಂ. ಒಟ್ಟು ವಿಸ್ತೀರ್ಣ 88.00 ಎಕರೆ ಜಮೀನನ್ನು ಪವನ ವಿದ್ಯುತ್ ಯೋಜನೆಗಾಗಿ ಮೆ. ಎಬಲ್‌ಟೆಕ್ ಎಲೆಕ್ಟ್ರೋ ಇಂಜಿನಿಯರ್ಸ್ (ಪ್ರೈ) ಲಿಮಿಟೆಡ್ ಕಂಪನಿಯವರಿಗೆ ಗುತ್ತಿಗೆ ನೀಡುವ ಬಗ್ಗೆ.

ಓದಲಾಗಿದೆ: 1) ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರ ಪತ್ರ ಸಂಖ್ಯೆ:ಪ್ರಆಬೆ:ಭೂಮಿ:4: ಎಲ್‌ಜಿಎಲ್:06:2008–09, ದಿನಾಂಕ 24–08–2010.
2) ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ ರವರ ಪತ್ರ ಸಂಖ್ಯೆ:3:ಭೂಮಿ:ವಹಿ–22:2008–09, ದಿನಾಂಕ 20–08–2011.
3) ಸುತ್ತೋಲೆ ಸಂಖ್ಯೆ: ಆರ್‌ಡಿ:78:ಎಲ್‌ಜಿಪಿ:2009, ದಿನಾಂಕ 4–1–2011

ಪ್ರಸ್ತಾವನೆ :

ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಹಾಗೂ ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ ಹಾವೇರಿರವರು ಮೇಲೆ ಓದಲಾದ (1) ಮತ್ತು (2)ರ ದಿನಾಂಕ 24–8–2010 ಹಾಗೂ 20–8–2011ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಹಾವೇರಿ ಜಿಲ್ಲೆ, ರಾಣಿಬೆನ್ನೂರು ಹಾಗೂ ಹಿರೇಕೇರೂರು ತಾಲ್ಲೂಕುಗಳಲ್ಲಿನ ವಿವಿಧ ಸರ್ವೆ ನಂಬರುಗಳ ಒಟ್ಟು ವಿಸ್ತೀರ್ಣ 98.00 ಎಕರೆ ಜಮೀನನ್ನು ಪವನ ವಿದ್ಯುತ್ ಯೋಜನೆಗಾಗಿ

ಮೆ: ಎಬಲ್‌ಟೆಕ್ ಎಲೆಕ್ಟ್ರೋ ಇಂಜಿನಿಯರ್ಸ್ (ಪ್ರೈ) ಲಿಮಿಟೆಡ್ ಕಂಪನಿ ಬೆಂಗಳೂರು ಇವರಿಗೆ ಗುತ್ತಿಗೆ ನೀಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪವನ ವಿದ್ಯುತ್ ಯೋಜನೆಗಾಗಿ ಮೆ: ಎಬಲ್‌ಟೆಕ್ ಎಲೆಕ್ಟ್ರೋ ಇಂಜಿನಿಯರ್ಸ್ (ಪ್ರೈ) ಲಿಮಿಟೆಡ್ ಕಂಪೆನಿಯವರಿಗೆ ಗುತ್ತಿಗೆ ನೀಡಲು ಪ್ರಸ್ತಾಪಿಸಿರುವ ರಾಣಿಬೆನ್ನೂರು ಹಾಗೂ ಹಿರೇಕೇರೂರು ತಾಲ್ಲೂಕುಗಳಲ್ಲಿನ ಗ್ರಾಮಗಳ ಜಮೀನು ಈ ಕೆಳಕಂಡಂತೆ ಇರುತ್ತದೆ.

ತಾಲ್ಲೂಕಿನ ಹೆಸರು	ಗ್ರಾಮದ ಹೆಸರು	ಸ.ನಂ.	ಒಟ್ಟು ಕ್ಷೇತ್ರ (ಎ-ಗು)	ಮಂಜೂರಿಗೆ ಕೋರಿದ ಕ್ಷೇತ್ರ (ಎ-ಗು)	ಜಮೀನಿನ ವರ್ಗೀಕರಣ
ರಾಣಿಬೆನ್ನೂರು	1. ತಿರುಮಲದೇವರಕೊಪ್ಪ	26	48.26	12.00	ಮುಫತ್ ಗಾಯರಾಣ
ಹಿರೇಕೆರೂರು	2. ಹಿರೇಭೂದಿಹಾಳ	42	18.28	8.00	ಗುಡ್ಡ ಗಾಯರಾಣ
	3. ಹಿರೇಭೂದಿಹಾಳ	72	30.25	12.00	ಮಳಮಲ್ಲಪ್ಪನ ಗುಡ್ಡ
	4. ಆಲದಗೇರಿ	50	123.30	10.00	ಅಡ್ಡಗುಡ್ಡ ಮಾಫಿ
	5. ಆಲದಗೇರಿ	27	18.07	6.00	ಸೂರಗುಡ್ಡ
	6. ಆಲದಗೇರಿ	20	16.09	5.00	ಸೋಮನ ಮಟ್ಟಿ
	7. ಬಾಬಪೂರ	04	60.06	10.00	ಕಾದಿಟ್ಟ ಅರಣ್ಯ
	8. ಒಡೆಯನಪುರ	113	44.32	15.00	ಸರ್ಕಾರಿ-ಊರ ದನಗಳು ಮೇಯುವ ಬಗ್ಗೆ ಹುಲ್ಲುಗಾವಲು ಹಾಗೂ ಮಾಫಿಗುಡ್ಡ
	9. ಚಿಣ್ಣಮುಳಗುಂದ	03	105.30	20.00	ಸರ್ಕಾರಿ ಲಾಗವಾಡ ಆಗದಂತ ಬೀಳು
			ಒಟ್ಟು	**98.00**	

ಮೇಲೆ ಕಾಣಿಸಿದ ಕ್ರಮ ಸಂಖ್ಯೆ 1 ಹಾಗೂ 2 ರಲ್ಲಿ ಗಾಯರಾಣ ಜಮೀನು, ಕ್ರಮ ಸಂಖ್ಯೆ 3,4,5 ಇವುಗಳು "ಗುಡ್ಡ" ಜಮೀನು ಕ್ರಮ ಸಂಖ್ಯೆ 7ರಲ್ಲಿ "ಕಾಯ್ದಿಟ್ಟ ಅರಣ್ಯ" ಜಮೀನು ಹಾಗೂ ಕ್ರಮ ಸಂಖ್ಯೆ 8.9 ಇವುಗಳು ಸರ್ಕಾರಿ ಜಮೀನಾಗಿರುವುದರಿಂದ ಪಹಣಿ ಪತ್ರಿಕೆ ಕಲಂ 9ರಲ್ಲಿ ದಾಖಲೆ ಇರುವುದು ಕಂಡುಬರುತ್ತದೆ.

ಇಂಧನ ಇಲಾಖೆಯ ಆದೇಶ ಸಂಖ್ಯೆ: ಇಎನ್:39:ಎನ್‌ಸಿಇ:2009, ದಿನಾಂಕ 07-10-2009ರನ್ವಯ ಮೆ: ಎಬಲ್‌ಟೆಕ್ ಎಲೆಕ್ಟ್ರೋ ಇಂಜಿನಿಯರ್ಸ್ (ಪ್ರೈ) ಲಿಮಿಟೆಡ್ ಕಂಪನಿ ಇವರಿಗೆ ಹಾವೇರಿ ಜಿಲ್ಲೆಯಲ್ಲಿ 19.8 ಮೆಗಾವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಕುರಿತು 11 ಷರತ್ತಿಗೊಳಪಟ್ಟು ಮಂಜೂರಾತಿ ನೀಡಿರುತ್ತದೆ. ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಬೆಂಗಳೂರು ರವರು ತಮ್ಮ ದಿನಾಂಕ 22-6-2010 ರಂತೆ ಪ್ರಸ್ತಾವಿತ ಘಟಕವು ಕೇವಲ ಸೂರ್ಯ ಪ್ರಕಾಶವನ್ನು ಉಪಯೋಗಿಸಿ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದ್ದು, ಇದರಿಂದ ಜಲ, ವಾಯು ಪ್ರಾಣಿ/ಪಕ್ಷಿ ಹಾಗೂ ಪರಿಸರಕ್ಕೆ ಯಾವುದೇ ಹಾನಿ ಆಗುವುದಿಲ್ಲ. ಅಲ್ಲದೆ ಇಂಧನ ಇಲಾಖೆಯ ದಿನಾಂಕ 21-7-2011ರ ಪತ್ರದಲ್ಲಿ ಮೆ: ಎಬಲ್‌ಟೆಕ್ ಎಲೆಕ್ಟ್ರೋ ಇಂಜಿನಿಯರ್ಸ್ (ಪ್ರೈ) ಲಿಮಿಟೆಡ್ ಕಂಪನಿ ಇವರಿಗೆ 19.8 ಮೆಗಾವ್ಯಾಟ್ ಸಾಮರ್ಥ್ಯದ ಪವನ್ ವಿದ್ಯುತ್ ಘಟಕ ಸ್ಥಾಪಿಸುವ ಬಗ್ಗೆ ಇರುವ ಒಡಂಬಡಿಕೆ ಕರಾರಿಗೆ ಸಹಿಹಾಕಿರುತ್ತಾರೆ.

ಹಿರೇಕೆರೂರು ತಾಲ್ಲೂಕಿನ, ಹಿರೇಭೂದಿಹಾಳ ಗ್ರಾಮದ ಸ.ನಂ. 42ರ ಜಮೀನು "ಗೋಮಾಳ" ಜಮೀನಾಗಿದ್ದು ಗ್ರಾಮದಲ್ಲಿ 855 ಜಾನುವಾರುಗಳಿದ್ದು, 257 ಎಕರೆ ಜಮೀನು ಅವಶ್ಯವಿರುತ್ತದೆ. ಆದರೆ ಸುಮಾರು 166 ಎಕರೆ ಜಮೀನು ಲಭ್ಯವಿದೆ ಸಧ್ಯ ಜಾನುವಾರುಗಳ ಸಂಖ್ಯೆ ಬಹಳ ಕಡಿಮೆಯಾಗಿದೆ ಎಂದು ಹಾಗೂ ಜಾನುವಾರುಗಳು ಮೇಯಲು ಪರ್ಯಾಯ ವ್ಯವಸ್ಥೆ ಇದೆ ಎಂದು ಹಾಗೂ ಒಡೆಯನಪುರ ಗ್ರಾಮದ ಸ.ನಂ. 113 "ಮಾಫಿಗುಡ್ಡ" ಇದ್ದು ಕ್ಷೇತ್ರ 44 ಎಕರೆ 34 ಗುಂಟೆ ಲಭ್ಯವಿದ್ದು ಇದರಲ್ಲಿ 8-00 ಎಕರೆ ನಿವೇಶನಕ್ಕಾಗಿ ಮಂಜೂರಾಗಿದೆ. ಉಳಿದ 37 ಎಕರೆ 28 ಗುಂಟೆ ಪೈಕಿ 0-32 ಗುಂಟೆ "ಸಾಗುಫಡಾ" ಅಂತಾ ಇದೆ. ಗ್ರಾಮದಲ್ಲಿ 642 ಜಾನುವಾರುಗಳಿದ್ದು ಜನಗಣತಿ ಪ್ರಕಾರ ಸುಮಾರು 193 ಎಕರೆ ಜಮೀನು ಅವಶ್ಯವಿದೆ. ಗ್ರಾಮದಲ್ಲಿ 58-00 ಎಕರೆ ಜಮೀನು ಲಭ್ಯವಿದ್ದು ದನಗಳು ಮೇಯಲು ವಿಶಾಲವಾದ ಕೆರೆ ಅಂಗಲ ಹಾಗೂ ಚಿನ್ನಮುಳಗುಂದ ಅರಳಿಕಟ್ಟೆ ಗ್ರಾಮಗಳ ಗುಡ್ಡಗಳಿವೆ. ರಾಣಿಬೆನ್ನೂರು ತಾಲ್ಲೂಕು ತಿರುಮಲದೇವರಕೊಪ್ಪ ಗ್ರಾಮದ ರಿ.ಸ.ನಂ. 26 ಕ್ಷೇತ್ರ 48 ಎಕರೆ 26 ಗುಂಟೆ ಪೈಕಿ 12-00 ಎಕರೆ ಜಮೀನನ್ನು ಗುತ್ತಿಗೆ ನೀಡಲು ಪ್ರಸ್ತಾವನೆ ಸಲ್ಲಿಸಿದ್ದು ಸದರಿ ಗ್ರಾಮದಲ್ಲಿ ಒಟ್ಟು 664 ಜಾನುವಾರುಗಳಿದ್ದು, ಜಾನುವಾರುಗಳು ಮೇಯಿಲಿಕ್ಕೆ ಹೆಚ್ಚುವರಿ ಜಮೀನು ಲಭ್ಯವಿದೆ ಎಂದು ವರದಿ ಮಾಡಿದ್ದಾರೆ.

ಮೆ: ಎಬಲ್‌ಟೆಕ್ ಎಲೆಕ್ಟ್ರೋ ಇಂಜಿನಿಯರ್ಸ್ (ಪ್ರೈ) ಲಿಮಿಟೆಡ್ ಕಂಪನಿಯವರಿಗೆ ಪವನ ವಿದ್ಯುತ್ ಯೋಜನೆ ಮಂಜೂರಾತಿಗಾಗಿ ಪ್ರಸ್ತಾಪಿಸಿರುವ ಹಿರೇಕೇರೂರು ತಾಲ್ಲೂಕು, ಬಾಬಾಪುರ ಗ್ರಾಮದ ಸ.ನಂ. 4ರಲ್ಲಿ 10-00 ಎಕರೆ ಜಮೀನನ್ನು "ಕಾಯ್ದಿಟ್ಟ ಅರಣ್ಯಕ್ಕೆ" ಎಂಬುದಾಗಿ ವರ್ಗೀಕೃತಗೊಂಡಿರುವುದರಿಂದ ಸದರಿ ಜಮೀನನ್ನು ಮಂಜೂರಾತಿಯಿಂದ ಕೈಬಿಡಲಾಗಿದೆ. ಬಾಕಿ ಉಳಿದ 88-00 ಎಕರೆ ಜಮೀನನ್ನು "ಸರ್ಕಾರಿ ಗುಡ್ಡ" ಜಮೀನುಗಳ ಲಕ್ಷಣಗಳನ್ನು ಹಾಗೇ ಉಳಿಸಿಕೊಂಡು ಈ ಸರ್ಕಾರಿ ಜಮೀನುಗಳಿಗೆ ಯಾವುದೇ ಹಾನಿಯಾಗದಂತೆ ಮತ್ತು ಒತ್ತುವರಿಯಾಗದಂತೆ, ಸಂರಕ್ಷಿಸಿಕೊಂಡು ಪ್ರಚಲಿತ ಮಾರುಕಟ್ಟೆ ದರದ ಶೇ. 10 ರಷ್ಟು ಗುತ್ತಿಗೆ ದರ ಹಾಗೂ ಪ್ರತಿ 2 ವರ್ಷಗಳಿಗೊಮ್ಮೆ ಶೇ. 10 ರಷ್ಟು ಗುತ್ತಿಗೆ ದರ ಹೆಚ್ಚಿಸುವ ಷರತ್ತಿಗೊಳಪಟ್ಟ ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(4)ರಂತೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19ರನ್ವಯ 30 ವರ್ಷಗಳ ಅವದಿಗೆ ಗುತ್ತಿಗೆ ಆಧಾರದ ಮೇಲೆ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಮೆ: ಎಬಲ್‌ಟೆಕ್ ಎಲೆಕ್ಟ್ರೋ ಇಂಜಿನಿಯರ್ಸ್ (ಪ್ರೈ) ಲಿಮಿಟೆಡ್ ಕಂಪನಿ, ಬೆಂಗಳೂರು ಇವರಿಗೆ ಪವನ ವಿದ್ಯುತ್ ಯೋಜನೆಗಾಗಿ ಮಂಜೂರು ಮಾಡಲು ತೀರ್ಮಾನಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಕಂದಾಯ ಇಲಾಖೆಯ ಸುತ್ತೋಲೆಯಲ್ಲಿ ದಿನಾಂಕ 3–11–2011ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಇಂಧನ ಇಲಾಖೆಯ ಕೋರಿಕೆಯಂತೆ ಇನ್ನು ಮುಂದೆ ಸರ್ಕಾರಿ ಜಮೀನುಗಳನ್ನು ಗುತ್ತಿಗೆ ಆದಾರದ ಮೇಲೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಮೂಲಕ ಮಂಜೂರು ಮಾಡುವ ಬದಲಾಗಿ ನೇರವಾಗಿ ಯೋಜನೆ ಕೈಗೊಳ್ಳುವ ಸಂಸ್ಥೆಗೆ ಗುತ್ತಿಗೆ ಆದಾರದ ಮೇಲೆ ಮಂಜೂರು ಮಾಡಲು ನಿರ್ಣಯಿಸಲಾಗಿರುತ್ತದೆ.

ಪ್ರಾದೇಶಿಕ ಆಯುಕ್ತರು, ಬೆಳಗಾವಿ ಹಾಗೂ ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ ರವರ ಪ್ರಸ್ತಾವನೆಯನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 63 ಎಲ್‌ಜಿಡಿ 2010, ಬೆಂಗಳೂರು, ದಿನಾಂಕ 12–12–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲ್ಲೂಕಿನ ತಿರುಮಲದೇವರಕೊಪ್ಪ ಗ್ರಾಮದ ಸ.ನಂ. 26ರಲ್ಲಿ 12–00 ಎಕರೆ ಮುಫತ್ ಗಾಯರಾಣ ಜಮೀನನ್ನು ಹಾಗೂ ಹಿರೇಕೆರೂರು ತಾಲ್ಲೂಕಿನ, ಹಿರೇಬೂದಿಹಾಳ ಗ್ರಾಮದ ಸ.ನಂ. 42ರಲ್ಲಿ ಒಟ್ಟು 8–00 ಎಕರೆ ಗುಡ್ಡ ಗಾಯರಾಣ ಜಮೀನು, ಇದೇ ಗ್ರಾಮದ ಸ.ನಂ. 72ರಲ್ಲಿ 12–00 ಎಕರೆ ಮಳೆಮಲ್ಲಪ್ಪನ ಗುಡ್ಡ ಜಮೀನು, ಆಲದಗೇರಿ ಸ.ನಂ. 50ರಲ್ಲಿ 10–00 ಎಕರೆ ಅಡ್ಡಗುಡ್ಡ ಮಾಫಿ ಜಮೀನು, ಇದೇ ಗ್ರಾಮದ ಸ.ನಂ. 27ರಲ್ಲಿ 6–00 ಎಕರೆ ಸೂರಗುಡ್ಡ ಜಮೀನು, ಸ.ನಂ. 20ರಲ್ಲಿ 5–00 ಎಕರೆ ಸೋಮನಮಟ್ಟಿ ಜಮೀನು, ಒಡೆಯನಪುರ ಗ್ರಾಮದ ಸ.ನಂ. 113ರಲ್ಲಿ 15–00 ಎಕರೆ ಹುಲ್ಲುಗಾವಲು ಹಾಗೂ ಮಾಫಿಗುಡ್ಡ ಜಮೀನು ಹಾಗೂ ಚಿಣ್ಣ ಮುಳಗುಂದ ಸ.ನಂ. 3ರಲ್ಲಿ 20–00 ಎಕರೆ ಸರ್ಕಾರಿ ಬೀಳು ಜಮೀನು ಒಟ್ಟು 88–00 ಎಕರೆ ಜಮೀನು ಪ್ರಚಲಿತ ಮಾರುಕಟ್ಟೆ ದರದ ಶೇ. 10 ರಷ್ಟು ಹಾಗೂ ಪ್ರತಿ 2 ವರ್ಷಗಳಿಗೊಮ್ಮೆ ಶೇ. 10 ರಷ್ಟು ಗುತ್ತಿಗೆ ದರ ಹೆಚ್ಚಿಸುವ ಷರತ್ತಿಗೊಳಪಟ್ಟು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(4)ರಂತೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19 ರನ್ವಯ 30 ವರ್ಷಗಳ ಅವದಿಗೆ ಗುತ್ತಿಗೆ ಆಧಾರದ ಮೇಲೆ "ಸರ್ಕಾರಿ ಗುಡ್ಡ" ಜಮೀನುಗಳ ಲಕ್ಷಣಗಳನ್ನು ಹಾಗೇ ಉಳಿಸಿಕೊಂಡು ಈ ಜಮೀನುಗಳಿಗೆ ಯಾವುದೇ ಹಾನಿಯಾಗದಂತೆ ಮತ್ತು ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳುವ ನಿಬಂಧನೆ ವಿಧಿಸಿ ಪವನ ವಿದ್ಯುತ್ ಉತ್ಪಾದಿಸುವ ಉದ್ದೇಶಕ್ಕಾಗಿ ಮೆ: ಎಬಲ್‌ಟೆಕ್ ಎಲೆಕ್ಟ್ರೋ ಇಂಜಿನಿಯರ್ಸ್ (ಪ್ರೈ) ಲಿಮಿಟೆಡ್ ಕಂಪನಿ, ಬೆಂಗಳೂರು ಇವರಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಅನುಮತಿ ನೀಡಿ ಆದೇಶಿಸಲಾಗಿದೆ.–

1) ಈ ಜಮೀನನ್ನು ಯಾವ ಉದ್ದೇಶಕ್ಕಾಗಿ ಮಂಜೂರಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದು
2) ಮಂಜೂರಾತಿ ನೀಡಿದ ಅವಧಿಯಲ್ಲಿ ಉಪಯೋಗಿಸದೇ ಇದ್ದಲ್ಲಿ ನಿಯಮಾನುಸಾರ ಕ್ರಮ ಜರುಗಿಸಿ ಮರಳಿ ಸರ್ಕಾರದ ವಶಕ್ಕೆ ಪಡೆದುಕೊಳ್ಳಲಾಗುವುದು.
3) ಸದರಿ ಜಮೀನಿನಲ್ಲಿ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮ ವಹಿಸತಕ್ಕದ್ದು
4) ಸರ್ಕಾರದಿಂದ ಪೂರ್ವಾನುಮೋದನೆ ಇಲ್ಲದೆ ಲೀಸ್ ಮೇಲೆ ಮಂಜೂರು ಪಡೆದವರು ಬೇರೆ ಯಾವ ಸಂಸ್ಥೆಗೂ ಸಬ್–ಲೀಸ್ ನೀಡಬಾರದು.
5) ದಿನಾಂಕ 22–12–2007ರ ಸರ್ಕಾರಿ ಆದೇಶದಲ್ಲಿ ವಿಧಿಸಿದ ಷರತ್ತುಗಳಿಗೆ ಸದರಿ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ:895:ವೆಚ್ಚ–7/2011, ದಿನಾಂಕ 4–11–2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್. ಜೆ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಮಂಜೂರಾತಿ–3)

ಪಿ.ಆರ್. 231

ಕಂದಾಯ ಸಚಿವಾಲಯ

ವಿಷಯ : ಶ್ರೀ ವೈ. ಎಸ್. ಹುಚ್ಚಣ್ಣ, ನಿವೃತ್ತ ತಹಶೀಲ್ದಾರ್, ಇವರ ತಡೆಹಿಡಿದಿರುವ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :
(1) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)/ಜಿ–9/ಸಿಆರ್–3/2006, ಕೊಪ್ಪಳ, ದಿನಾಂಕ 13–03–2006.
(2) ಸರ್ಕಾರದ ಆದೇಶ ಸಂಖ್ಯೆ : ಕಂಇ 13 ಎಡಿಇ 2006, ದಿನಾಂಕ 18–04–2006.
(3) ಶ್ರೀ ವೈ. ಎಸ್. ಹುಚ್ಚಣ್ಣ, ನಿವೃತ್ತ ತಹಶೀಲ್ದಾರ್, ಇವರ ಮನವಿ ದಿನಾಂಕ 21–12–2011.
(4) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)/ಜಿ–9/ಸಿಆರ್–3/2006, ಕೊಪ್ಪಳ, ದಿನಾಂಕ 16–12–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (1)ರ ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ 13–03–2006 ರ ಪತ್ರದಲ್ಲಿ ಶ್ರೀ ವೈ. ಎಸ್. ಹುಚ್ಚಣ್ಣ, ತಹಶೀಲ್ದಾರ್, ಗಂಗಾವತಿ ಇವರು ದಿನಾಂಕ 25–02–2006 ರಂದು ರೂ. 20,000 ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೋಲೀಸ್‌ಗೆ ಸಿಕ್ಕಿ ಬಿದ್ದಿದ್ದರಿಂದ ಸದರಿಯವರನ್ನು ಸೇವೆಯಿಂದ ಅಮಾನತ್ತು ಮಾಡಲು ಹಾಗೂ ಸದರಿಯವರನ್ನು ವರ್ಗಾವಣೆ ಮಾಡಲು ಕೋರಿದ್ದರು.

ಅದರಂತೆ ಪರಿಶೀಲಿಸಿ, ಮೇಲೆ ಓದಲಾದ ಕ್ರ. ಸಂ. (2)ರ ದಿನಾಂಕ 18–04–2006 ರ ಆದೇಶದಲ್ಲಿ ಸೇವೆಯಿಂದ ಅಮಾನತ್ತು ಮಾಡಲಾಗಿತ್ತು. ಆದರೆ ಶ್ರೀ ವೈ. ಎಸ್. ಹುಚ್ಚಣ್ಣ, ತಹಶೀಲ್ದಾರ್ ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಲೋಕಾಯುಕ್ತರವರು ಭ್ರಷ್ಟಾಚಾರ

ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಗೆ 13(2) ರ ಅಡಿಯಲ್ಲಿ ದಾಖಲಿಸಿದ ಪ್ರಕರಣ ಸಂಖ್ಯೆ : 3/2006 ರ ತನಿಖೆಯನ್ನು ಮುಂದುವರಿಸಬಾರದೆಂದು ತಡೆಯಾಜ್ಞೆಯನ್ನು ಕ್ರಿಮಿನಲ್ ಅರ್ಜಿ ಸಂ. 1857/2006 ರಲ್ಲಿ ದಿನಾಂಕ 17–04–2006 ರಲ್ಲಿ ತಡೆಯಾಜ್ಞೆ ತಂದಿದ್ದರು. ಈ ಬಗ್ಗೆ ಪರಿಶೀಲಿಸಿ ಅಮಾನತ್ತು ಆದೇಶವನ್ನು ಜಾರಿಗೊಳಿಸಿರಲಿಲ್ಲ.

ಶ್ರೀ ವೈ. ಎಸ್. ಹುಚ್ಚಣ್ಣ, ನಿವೃತ್ತ ತಹಶೀಲ್ದಾರ್ ಇವರು ದಿನಾಂಕ 31–12–2007 ರಂದು ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದರಿಂದ, ತಮಗೆ ದೊರೆಯಬೇಕಾದ ಪಿಂಚಣಿ ಸೌಲಭ್ಯಗಳನ್ನು ಹಾಗೂ 240 ದಿವಸಗಳ ಗಳಿಕೆ ರಜೆ ನಗದೀಕರಣಕ್ಕೆ ಮಂಜೂರು ಮಾಡಲು ಸರ್ಕಾರವನ್ನು ಕೋರಿದ್ದರು.

ಆದರೆ, ಶ್ರೀಯುತರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದ್ದು ತನಿಖೆ ಮುಂದುವರೆದಿದ್ದರಿಂದ, ಅಂದರೆ ಕ್ರಿಮಿನಲ್ ಮೊಕದ್ದಮೆ ಬಾಕಿ ಇರುವಾಗ ನಿವೃತ್ತಿ ಸೌಲಭ್ಯಗಳನ್ನು ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (3)ರ ದಿನಾಂಕ 21–12–2011 ರ ಪತ್ರದಲ್ಲಿ ಶ್ರೀ ವೈ. ಎಸ್. ಹುಚ್ಚಣ್ಣ, ನಿವೃತ್ತ ತಹಶೀಲ್ದಾರ್ ಇವರು ತಮ್ಮ ವಿರುದ್ಧದ ಕ್ರಿಮಿನಲ್ ಮೊಕದ್ದಮೆಯಲ್ಲಿ ದೋಷಮುಕ್ತಗೊಂಡಿದ್ದು, ತಮಗೆ ದೊರೆಯಬೇಕಾದ ನಿವೃತ್ತಿ ಸೌಲಭ್ಯಗಳನ್ನು ನೀಡುವಂತೆ ಕೋರಿರುತ್ತಾರೆ.

ಪ್ರಸ್ತುತ ಮೇಲೆ ಓದಲಾದ ಕ್ರ.ಸಂ. (4)ರ ದಿನಾಂಕ 16–12–2011 ರ ಪತ್ರದಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಶ್ರೀ ವೈ. ಎಸ್. ಹುಚ್ಚಣ್ಣ, ತಹಶೀಲ್ದಾರ್ (ಹಾಲಿ ನಿವೃತ್ತ) ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ಮೇಲಿನ ಟ್ರ್ಯಾಪ್ ಪ್ರಕರಣವು ಕೊಪ್ಪಳ ಜಿಲ್ಲಾ ಘನ ನ್ಯಾಯಾಲಯದಲ್ಲಿ ವಿಶೇಷ ಪ್ರಕರಣ ಸಂಖ್ಯೆ : 3/2008 ರಲ್ಲಿ ವಿಚಾರಣೆ ನಡೆದು ಘನ ನ್ಯಾಯಾಲಯವು ದಿನಾಂಕ 02–07–2011 ರಂದು ಅಕ್ವಿಟ್ ತೀರ್ಪು ನೀಡಿದ್ದು, ಸದರಿ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಸರ್ಕಾರವು ಪತ್ರ ಸಂಖ್ಯೆ : ಹೆಚ್‌ಡಿ : 6701/ ಹೆಚ್‌ಸಿಪಿ–1/2011, ದಿನಾಂಕ 21–11–2011 ರಲ್ಲಿ ತೀರ್ಮಾನಿಸಿರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಅಂದರೆ ಶ್ರೀಯುತರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಮೊಕದ್ದಮೆಯಲ್ಲಿ ಆರೋಪ ಮುಕ್ತರಾಗಿರುವುದರಿಂದ, ತಡೆಹಿಡಿದಿರುವ ಇವರ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಲು ನಿರ್ಧರಿಸಿರುವುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 13 ಎಡಿಇ 2006, ಬೆಂಗಳೂರು, ದಿನಾಂಕ 04ನೇ ಜನವರಿ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ವೈ. ಎಸ್. ಹುಚ್ಚಣ್ಣ, ನಿವೃತ್ತ ತಹಶೀಲ್ದಾರ್ ಇವರ ಮೇಲಿನ ಲೋಕಾಯುಕ್ತ ಟ್ರ್ಯಾಪ್ ಪ್ರಕರಣವು ಕೊಪ್ಪಳ ಜಿಲ್ಲಾ ಘನ ನ್ಯಾಯಾಲಯದಲ್ಲಿ ವಿಶೇಷ ಪ್ರಕರಣ ಸಂಖ್ಯೆ : 3/2008 ರಲ್ಲಿ ವಿಚಾರಣೆ ನಡೆದು ಘನ ನ್ಯಾಯಾಲಯವು ದಿನಾಂಕ 02–07–2011 ರಂದು ಆರೋಪ ಮುಕ್ತವೆಂದು ತೀರ್ಪು ನೀಡಿರುವುದರಿಂದ, ತಡೆಹಿಡಿದಿರುವ ಶ್ರೀಯುತರ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಗೋಪಾಲಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ. (ಸೇವೆಗಳು–3)

ಪಿ.ಆರ್. 232

ಕಂದಾಯ ಸಚಿವಾಲಯ

ವಿಷಯ : ಉಡುಪಿ ತಾಲ್ಲೂಕು, ಹನೆಹಳ್ಳಿ ಗ್ರಾಮ, ಬಾರ್ಕೂರು ಮೂಡುಕೆರೆ ಗೋಪಾಲಕೃಷ್ಣ ಶ್ರೀ ಕೆರೆಕಟ್ಟೆ ಗೋಪಾಲಕೃಷ್ಣ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಡುವ ಬಗ್ಗೆ.

ಓದಲಾಗಿದೆ : ಪತ್ರ ಸಂಖ್ಯೆ : ಎಡಿಎಂ 5 ಸಿಆರ್ 19/2006–07, ದಿನಾಂಕ 25–11–2011.

ಪ್ರಸ್ತಾವನೆ :

ಉಡುಪಿ ತಾಲ್ಲೂಕು, ಹನೆಹಳ್ಳಿ ಗ್ರಾಮ, ಬಾರ್ಕೂರು ಮೂಡುಕೆರೆ ಗೋಪಾಲಕೃಷ್ಣ ಶ್ರೀ ಕೆರೆಕಟ್ಟೆ ಗೋಪಾಲಕೃಷ್ಣ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ (1997) ಜಾರಿಗೆ ಬಂದ ನಂತರ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸಲಾಗಿರುತ್ತದೆ. ಸದರಿ ದೇವಾಲಯವು ಸೋಮ ಕ್ಷತ್ರಿಯ ಸಮಾಜ (ಗಾಣಿಗ ಸಮಾಜ)ಕ್ಕೆ ಸೇರಿದ್ದು, ದೇವಾಲಯದ ಆಡಳಿತವನ್ನು ಸೋಮಕ್ಷತ್ರಿಯ ಸಮಾಜ ದಕ್ಷಿಣ ಕನ್ನಡ ಜಿಲ್ಲಾ ಸೋಮಕ್ಷತ್ರಿಯ ಸಮಾಜ (ರಿ), ಬಾರ್ಕೂರು ಸಂಘ ನಿರ್ವಹಿಸಲಾಗುತ್ತಿದೆ. ಉಲ್ಲೇಖಿತ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಡುವಂತೆ ಜಿಲ್ಲಾಧಿಕಾರಿ, ಉಡುಪಿ ಇವರು ಕೋರಿರುವ ಹಿನ್ನೆಲೆಯಲ್ಲಿ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಕುರಿತಂತೆ ದಿನಾಂಕ 29–10–2011 ರಂದು ನಡೆದ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ಚರ್ಚಿಸಿದ ನಂತರ ಪ್ರಸ್ತಾಪಿತ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತುಪಡಿಸಲು ನಿರ್ಣಯಿಸಲಾಗಿದೆ.

ಆ ಮೇರೆಗೆ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 98 ಮುಆಬಿ 2011, ಬೆಂಗಳೂರು, ದಿನಾಂಕ 02ನೇ ಜನವರಿ 2012

ಉಡುಪಿ ತಾಲ್ಲೂಕು, ಹನೆಹಳ್ಳಿ ಗ್ರಾಮ, ಬಾರ್ಕೂರು ಮೂಡುಕೆರೆ ಗೋಪಾಲಕೃಷ್ಣ ಶ್ರೀ ಕೆರೆಕಟ್ಟೆ ಗೋಪಾಲಕೃಷ್ಣ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ (1997)ರ ಕಲಂ 35ರ ಮೇರೆಗೆ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ತೆಗೆದುಹಾಕಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಲ್.ಎಸ್. ಶ್ರೀಕಂಠಬಾಬು,
ಪೀಠಾಧಿಕಾರಿ,
ಕಂದಾಯ ಇಲಾಖೆ (ಮುಜರಾಯಿ).

ಪಿ.ಆರ್. 233

ಕಂದಾಯ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕು, ಶ್ರೀ ಗಂಗಾಜಲ ಚೌಡೇಶ್ವರಿ ದೇವಸ್ಥಾನವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ.

ಓದಲಾಗಿದೆ : ಪತ್ರ ಸಂಖ್ಯೆ : ಎಡಿಎಂ 5 ಸಿಆರ್ 50/2010-11, ದಿನಾಂಕ 25-08-2011.

ಪ್ರಸ್ತಾವನೆ :

ಹಾವೇರಿ ಜಿಲ್ಲೆ, ರಾಣೆಬೆನ್ನೂರಿನ ಶ್ರೀ ಗಂಗಾಜಲ ಚೌಡೇಶ್ವರಿ ದೇವಸ್ಥಾನವು ಅಂದಿನ ಬಾಂಬೆ ಪಬ್ಲಿಕ್ ಟ್ರಸ್ಟ್ ಅಧಿನಿಯಮ (1997)ರ ಅಡಿ ನೋಂದಾಯಿಸಲ್ಪಟ್ಟ ಸಂಸ್ಥೆಯಾಗಿದ್ದು, ಸದರಿ ಅಧಿನಿಯಮ ರದ್ದಾಗಿ ನಂತರ ಜಾರಿಗೆ ಬಂದ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ (1997) ರ ಕಲಂ 23 ರನ್ವಯ ಪ್ರಕಟಿಸಿರುವ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ. ಈ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಗೆ ಸೇರಿಸುವಂತೆ ಜಿಲ್ಲಾಧಿಕಾರಿ, ಹಾವೇರಿ ಇವರು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ, ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಕುರಿತಂತೆ ದಿನಾಂಕ 29-10-2011 ರಂದು ನಡೆದ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ಚರ್ಚಿಸಿದ ನಂತರ ಉಲ್ಲೇಖಿತ ದೇವಸ್ಥಾನವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಗೆ ಸೇರ್ಪಡೆ ಮಾಡಲು ನಿರ್ಣಯಿಸಲಾಗಿದೆ.

ಈ ಮೇರೆಗೆ ಪರಿಶೀಲಿಸಿದ ನಂತರ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 80 ಮುಆಬಿ 2011, ಬೆಂಗಳೂರು, ದಿನಾಂಕ 31ನೇ ಡಿಸೆಂಬರ್ 2011

ಹಾವೇರಿ ಜಿಲ್ಲೆ, ರಾಣೆಬೆನ್ನೂರಿನ ಶ್ರೀ ಗಂಗಾಜಲ ಚೌಡೇಶ್ವರಿ ದೇವಸ್ಥಾನವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ (1997) ರ ಕಲಂ 23 ರನ್ವಯ ಅಧಿಸೂಚಿತ ಸಂಸ್ಥೆಗಳ ಪಟ್ಟಿಗೆ ಸೇರಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್.ಎಸ್. ಶ್ರೀಕಂಠಬಾಬು,

ಪೀಠಾಧಿಕಾರಿ,

ಕಂದಾಯ ಇಲಾಖೆ (ಮುಜರಾಯಿ).

ಪಿ.ಆರ್. 234

ಕಂದಾಯ ಸಚಿವಾಲಯ

ವಿಷಯ : ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕು, ಹಳೇ ಹುಬ್ಬಳ್ಳಿ ಶ್ರೀ ಬನಶಂಕರಿ ದೇವಿ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಡುವ ಬಗ್ಗೆ.

ಓದಲಾಗಿದೆ : ಪತ್ರ ಸಂಖ್ಯೆ : ಎಡಿಎಂ 5 ಸಿಆರ್ 29/2009-10, ದಿನಾಂಕ 07-12-2011.

ಪ್ರಸ್ತಾವನೆ :

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕು, ಹಳೇ ಹುಬ್ಬಳ್ಳಿ ಶ್ರೀ ಬನಶಂಕರಿ ದೇವಿ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ (1997) ಜಾರಿಗೆ ಬಂದ ನಂತರದಲ್ಲಿ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸಲಾಗಿರುತ್ತದೆ. ಈ ದೇವಸ್ಥಾನವು ದೇವಾಂಗ ಸಮಾಜಕ್ಕೆ ಸೇರಿದ್ದು, ಅಂದಿನ ಬಾಂಬೆ ಪಬ್ಲಿಕ್ ಟ್ರಸ್ಟ್ ಅಧಿನಿಯಮ (1950)ರ ಅಡಿ ನೋಂದಾಯಿಸಲ್ಪಟ್ಟಿದ್ದು, ಬಿ.ಪಿ.ಟಿ. ಕಾಯ್ದೆಯನ್ವಯ ನೋಂದಾಯಿಸಿರುವ ಡಿ.ಟಿ.ಆರ್. ವಹಿಯಲ್ಲಿ ನಮೂದಾಗಿರುತ್ತದೆ. ಆದಕಾರಣ ಉಲ್ಲೇಖಿತ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಡುವಂತೆ ಜಿಲ್ಲಾಧಿಕಾರಿ, ಧಾರವಾಡ ಇವರು ಕೋರಿರುವ ಹಿನ್ನೆಲೆಯಲ್ಲಿ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಕುರಿತಂತೆ ದಿನಾಂಕ 29-10-2011 ರಂದು ನಡೆದ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ಚರ್ಚಿಸಿದ ನಂತರ ಪ್ರಸ್ತಾಪಿತ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತುಪಡಿಸಲು ನಿರ್ಣಯಿಸಲಾಗಿದೆ.

ಆ ಹಿನ್ನೆಲೆಯಲ್ಲಿ ಪ್ರಸ್ತಾವನೆ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 77 ಮುಆಬಿ 2011, ಬೆಂಗಳೂರು, ದಿನಾಂಕ 02ನೇ ಜನವರಿ 2012

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕು, ಹಳೇ ಹುಬ್ಬಳ್ಳಿ ಶ್ರೀ ಬನಶಂಕರಿ ದೇವಿ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದಿಪಡಿ ಅಧಿನಿಯಮ (1997) ಕಲಂ 35ರ ಮೇರೆಗೆ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ತೆಗೆದುಹಾಕಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್.ಎಸ್. ಶ್ರೀಕಂಠಬಾಬು,

ಪೀಠಾಧಿಕಾರಿ,

ಕಂದಾಯ ಇಲಾಖೆ (ಮುಜರಾಯಿ).

ಪಿ.ಆರ್. 235

ಕಂದಾಯ ಸಚಿವಾಲಯ

ವಿಷಯ : ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ಬಾರ್ಕೂರು, ಕಚ್ಚೂರು ಶ್ರೀ ನಾಗೇಶ್ವರ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಡುವ ಬಗ್ಗೆ.

ಓದಲಾಗಿದೆ : ಪತ್ರ ಸಂಖ್ಯೆ : ಎಡಿಎಂ 5 ಸಿಆರ್ 41/2010-11, ದಿನಾಂಕ 07-07-2011.

ಪ್ರಸ್ತಾವನೆ :

ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ಬಾರ್ಕೂರು, ಕಚ್ಚೂರು ಶ್ರೀ ನಾಗೇಶ್ವರ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ (1997) ಜಾರಿಗೆ ಬಂದ ನಂತರದಲ್ಲಿ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸಲಾಗಿರುತ್ತದೆ. ಸದರಿ ದೇವಸ್ಥಾನವು ಕ್ಷೌರಿಕ ವೃತ್ತಿಯ ಭಂಡಾರಿ ಸಮಾಜಕ್ಕೆ ಸೇರಿದ ದೇವಸ್ಥಾನವಾಗಿದ್ದು, ಈ ಸಮಾಜದ ವತಿಯಿಂದ ಆಡಳಿತ ನಿರ್ವಹಣೆ, ಜೀರ್ಣೋದ್ಧಾರ

ಕಾರ್ಯಗಳನ್ನು ನಡೆಸುತ್ತಾ ಬಂದಿರುತ್ತಾರೆ. ಉಲ್ಲೇಖಿತ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಡುವಂತೆ ಜಿಲ್ಲಾಧಿಕಾರಿ, ಉಡುಪಿ ಇವರು ಕೋರಿರುವ ಹಿನ್ನೆಲೆಯಲ್ಲಿ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಕುರಿತಂತೆ ದಿನಾಂಕ 29-10-2011 ರಂದು ನಡೆದ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ಚರ್ಚಿಸಿದ ನಂತರ ಪ್ರಸ್ತಾಪಿತ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತುಪಡಿಸಲು ನಿರ್ಣಯಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 70 ಮುಆಬಿ 2011, ಬೆಂಗಳೂರು, ದಿನಾಂಕ 30ನೇ ಡಿಸೆಂಬರ್ 2011

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ (1997) ರ ಕಲಂ 35ರ ಮೇರೆಗೆ ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ಬಾರ್ಕೂರು, ಕಚ್ಚೂರು ಶ್ರೀ ನಾಗೇಶ್ವರ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ತೆಗೆದುಹಾಕಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್.ಎಸ್. ಶ್ರೀಕಂಠಬಾಬು,

ಪಿ.ಆರ್. 236

ಪೀಠಾಧಿಕಾರಿ,

ಕಂದಾಯ ಇಲಾಖೆ (ಮುಜರಾಯಿ).

ಕಂದಾಯ ಸಚಿವಾಲಯ

ವಿಷಯ : ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ : ಕಂಇ 51 ಮುಸರ 2009, ದಿನಾಂಕ 25-02-2009.

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಲು ಆದೇಶಿಸಲಾಗಿತ್ತು.

1)	ಮಾನ್ಯ ವಿಧಾನಸಭಾ ಸದಸ್ಯರು, ಹಿರಿಯೂರು ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2)	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ಜಿಲ್ಲೆ	ಸದಸ್ಯರು
3)	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹಿರಿಯೂರು ತಾಲ್ಲೂಕು, ಚಿತ್ರದುರ್ಗ	ಸದಸ್ಯರು
4)	ತಹಶೀಲ್ದಾರ್, ಹಿರಿಯೂರು ತಾಲ್ಲೂಕು, ಚಿತ್ರದುರ್ಗ	ಸದಸ್ಯ-ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 140 ಮುಸರ 2011, ಬೆಂಗಳೂರು, ದಿನಾಂಕ 31ನೇ ಡಿಸೆಂಬರ್ 2011

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ವಿಧಾನ ಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು/ವಿಳಾಸ	ಪ್ರವರ್ಗ
1	ಶ್ರೀ ಮಹಂತೇಶ್ ಬಿನ್ ಕರಿಯಪ್ಪ, ಗೌನಹಳ್ಳಿ, ಸೂರಗೊಂಡನಹಳ್ಳಿ ಅಂಚೆ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ	ಸಾಮಾನ್ಯ
2	ಶ್ರೀಮತಿ ಬಿ. ಸುಧಾ ಕೋಂ ಎಂ. ಗಿರಿಸ್ವಾಮಿ, ನಂ. 10, 'ಗಿರಿನಿವಾಸ' ಅವಧಾನಿ ನಗರ, ಹಿರಿಯೂರು	ಮಹಿಳೆ
3	ಶ್ರೀ ಕೆ. ರಾಜಪ್ಪ ಬಿನ್ ಕಲ್ಲಪ್ಪ, ಮಸ್ಕಲ್, ಹಿರಿಯೂರು ತಾಲ್ಲೂಕು, ಚಿತ್ರದುರ್ಗ	ಪರಿಶಿಷ್ಟ ಜಾತಿ
4	ಶ್ರೀ ರಾಮಾಂಜನೇಯ ಬಿನ್ ರಾಮದಾಸಪ್ಪ, ಹುಲಿತೊಟ್ಲು, ಸೂರಗೊಂಡಹನಹಳ್ಳಿ ಅಂಚೆ ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಉಮಾಪತಿ,

ಪಿ.ಆರ್. 237

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆಯ ಹಿರೇಕೆರೂರು ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ : (1) ಸರ್ಕಾರದ ಆದೇಶ ಸಂಖ್ಯೆ : ಕಂಇ 101 ಮುಸರ 2008, ದಿನಾಂಕ 25-02-2009.
(2) ಸರ್ಕಾರದ ಆದೇಶ ಸಂಖ್ಯೆ : ಕಂಇ 101 ಮುಸರ 2008 (ಭಾ), ದಿನಾಂಕ 03-12-2009

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಹಾವೇರಿ ಜಿಲ್ಲೆಯ ಹಿರೇಕೆರೂರು ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಲು ಆದೇಶಿಸಲಾಗಿತ್ತು.

1)	ಮಾನ್ಯ ವಿಧಾನಸಭಾ ಸದಸ್ಯರು, ಹಿರೇಕೆರೂರು ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2)	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾವೇರಿ ಜಿಲ್ಲೆ	ಸದಸ್ಯರು
3)	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹಿರೇಕೆರೂರು ತಾಲ್ಲೂಕು	ಸದಸ್ಯರು
4)	ತಹಶೀಲ್ದಾರ್, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ	ಸದಸ್ಯ-ಕಾರ್ಯದರ್ಶಿ

ಮುಂದುವರೆದು, ನಾಲ್ಕು ಜನ ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ನಂತರ ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ ಈ ಕೆಳಕಂಡ ನಾಲ್ಕು ಅಧಿಕಾರೇತರನ್ನು ನೇಮಿಸಲಾಗಿತ್ತು.

1)	ಶ್ರೀ ಪ್ರಭು ಶಿದ್ದಪ್ಪ ನಾಡಿಗೇರ, ಕಡೂರು (ಸಾಮಾನ್ಯ)	ಸದಸ್ಯರು
2)	ಶ್ರೀಮತಿ ಜಯಮ್ಮ ಬಸವರಾಜ ದಶಮನಿ, ಹಂಸಭಾವಿ (ಮಹಿಳೆ)	ಸದಸ್ಯರು
3)	ಶ್ರೀ ಶಿವರಾಜ ದೊಡ್ಡ ಫಕೀರಪ್ಪ ಹರಿಜನ, ಚಿಕ್ಕೇರೂರು (ಪ.ಜಾತಿ)	ಸದಸ್ಯರು
4)	ಶ್ರೀ ಹನುಮಂತಪ್ಪ ಬಸಪ್ಪ ಹೊಸಳ್ಳಿ, ಕುಂಚೂರ (ಪ.ಪಂಗಡ)	ಸದಸ್ಯರು

ಈ ಹಿನ್ನೆಲೆಯಲ್ಲಿ ಪುನಃ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 78 ಮುಸರ 2011, ಬೆಂಗಳೂರು, ದಿನಾಂಕ 29ನೇ ಡಿಸೆಂಬರ್ 2011

ಹಾವೇರಿ ಜಿಲ್ಲೆಯ ಹಿರೇಕೆರೂರು ವಿಧಾನ ಸಭಾ ಕ್ಷೇತ್ರಕ್ಕೆ ಸರ್ಕಾರಿ ಆದೇಶ ಸಂಖ್ಯೆ ಕಂಇ 101 ಮುಸರ 2008 (ಭಾ) ದಿನಾಂಕ 03-12-2009 ರಲ್ಲಿ ಮಾಡಲಾದ ಅಧಿಕಾರೇತರರ ನೇಮಕಾತಿ ರದ್ದುಗೊಳಿಸಿ, ಸದರಿ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧೀಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು/ವಿಳಾಸ	ಪ್ರವರ್ಗ
1	ಶ್ರೀ ಸೋಮನಗೌಡ ತಿರಕನಗೌಡ ಕರಿಗೌಡ್ರ, ಸಾ : ಸುತ್ತಕೋಟೆ	ಸಾಮಾನ್ಯ
2	ಶ್ರೀಮತಿ ಲಕ್ಷ್ಮೀದೇವಿ ರವಿಕುಮಾರ ಪಾಟೀಲ, ಸಾ : ಹಳ್ಳೂರು	ಮಹಿಳೆ
3	ಶ್ರೀ ಬಂಗಾರನಾಯಕ ಹಾಲನಾಯಕ ಲಮಾಣಿ, ಸಾ : ಗಂಗಾಯಿಕೊಪ್ಪಾ	ಪರಿಶಿಷ್ಟ ಜಾತಿ
4	ಶ್ರೀ ರಾಜು ಬಸಪ್ಪ ಹಿತ್ತಲಮನಿ, ಸಾ: ಮೇದೂರು	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ಥಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಉಮಾಪತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 238

ಕಂದಾಯ ಸಚಿವಾಲಯ

ವಿಷಯ : ಉತ್ತರ ಕನ್ನಡ ಜಿಲ್ಲೆಯ ಕಾರವಾರ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ : ಕಂಇ 60 ಮುಸರ 2008 (ಭಾ), ದಿನಾಂಕ 25-02-2009.

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಲು ಆದೇಶಿಸಲಾಗಿತ್ತು.

1)	ಮಾನ್ಯ ವಿಧಾನಸಭಾ ಸದಸ್ಯರು, ಕಾರವಾರ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2)	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉತ್ತರ ಕನ್ನಡ ಜಿಲ್ಲೆ	ಸದಸ್ಯರು
3)	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಕಾರವಾರ ತಾಲ್ಲೂಕು	ಸದಸ್ಯರು
4)	ತಹಶೀಲ್ದಾರ್, ಕಾರವಾರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ	ಸದಸ್ಯ-ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 28 ಮುಸರ 2011, ಬೆಂಗಳೂರು, ದಿನಾಂಕ 27ನೇ ಡಿಸೆಂಬರ್ 2011

ಉತ್ತರ ಕನ್ನಡ ಜಿಲ್ಲೆಯ ಕಾರವಾರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧೀಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು/ವಿಳಾಸ	ಪ್ರವರ್ಗ
1	ಶ್ರೀ ಪ್ರಮೋದ ಬಾಂದೇಕರ, ಅಂಚೆ, ಶಿರವಾಡ ತಾಲ್ಲೂಕು, ಕಾರವಾರ	ಸಾಮಾನ್ಯ
2	ಶ್ರೀಮತಿ ಪದ್ಮಾ ವಸಂತ ಚಿತ್ರಾಲ್, ಕೈಕಿಣಿ ರಸ್ತೆ, ಅಂಚೆ : ಕಾರವಾರ	ಮಹಿಳೆ
3	ಶ್ರೀ ಚಂದ್ರಕಾಂತ ಬಾಬು ಅಗೇರ, ಹರಿಜನಕೇರಿ, ಅಂಚೆ : ಕಾರವಾರ	ಪರಿಶಿಷ್ಟ ಜಾತಿ
4	ಶ್ರೀ ಶಂಕರ ನಾಗು ಸಿದ್ಧಿ, ಸಾಕಿನ : ಮಖೇರಿ, ಅಂಚೆ : ಶೇಜವಾಡ	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ 03–02–2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಉಮಾಪತಿ,

ಪಿ.ಆರ್. 239

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯ ಸೇಡಂ ವಿಧಾನ ಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ : ಕಂಇ 93 ಮುಸರ 2008, ದಿನಾಂಕ 31–12–2008.

ಪ್ರಸ್ತಾವನೆ :

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಗುಲ್ಬರ್ಗಾ ಜಿಲ್ಲೆಯ ಸೇಡಂ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲು ಆದೇಶಿಸಲಾಗಿತ್ತು.

1)	ಮಾನ್ಯ ವಿಧಾನಸಭಾ ಸದಸ್ಯರು, ಸೇಡಂ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2)	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಗುಲ್ಬರ್ಗಾ ಜಿಲ್ಲೆ	ಸದಸ್ಯರು
3)	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸೇಡಂ ತಾಲ್ಲೂಕು	ಸದಸ್ಯರು
4)	ತಹಶೀಲ್ದಾರ್, ಬೈಲಹೊಂಗಲ ತಾಲ್ಲೂಕು	ಸದಸ್ಯ–ಕಾರ್ಯದರ್ಶಿ
5)	ಶ್ರೀ ವೆಂಕಟಯ್ಯ ಬಿನ್ ಶಿವಯ್ಯ ಶೆಟ್ಟಿ, ಚಂದಾಪುರ, ಸೇಡಂ ತಾಲ್ಲೂಕು (ಸಾಮಾನ್ಯ)	ಸದಸ್ಯರು
6)	ಶ್ರೀಮತಿ ದುರ್ಗಮ್ಮ ಕೋಂ ವೀರಾರೆಡ್ಡಿ, ಬಟಗೇರಾ (ಬಿ) ಸೇಡಂ ತಾಲ್ಲೂಕು (ಮಹಿಳೆ)	ಸದಸ್ಯರು
7)	ಶ್ರೀ ರಾಮಪ್ಪ ಬಿನ್ ಮೊಗಲಪ್ಪ ಬಡಸು, ರಾಘಾಪೂರ್ ಅಂಚೆ, ಸೇಡಂ ತಾಲ್ಲೂಕು (ಪರಿಶಿಷ್ಟ ಜಾತಿ)	ಸದಸ್ಯರು
8)	ಶ್ರೀ ಧರ್ಮಣ್ಣಾ ಬಿನ್ ಗುಂಡಪ್ಪ ಧರ್ಮಾನೋರ ಸಾಕಿನ್ ಹಂಗನಳ್ಳಿ ಅಂಚೆ, ಸೇಡಂ ತಾಲ್ಲೂಕು (ಪರಿಶಿಷ್ಟ ಪಂಗಡ)	ಸದಸ್ಯರು

ನಂತರ ಸರ್ಕಾರ ಮನಃ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 84 ಮುಸರ 2011, ಬೆಂಗಳೂರು, ದಿನಾಂಕ 29ನೇ ಡಿಸೆಂಬರ್ 2011

ಸರ್ಕಾರಿ ಆದೇಶ ಸಂಖ್ಯೆ ಕಂಇ 93 ಮುಸರ 2008 ದಿನಾಂಕ 31–12–2008 ನ್ನು ಭಾಗಶಃ ಮಾರ್ಪಡಿಸಿ ಗುಲ್ಬರ್ಗಾ ಜಿಲ್ಲೆ, ಸೇಡಂ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡ ಅಧೀಕಾರೇತರ ಸದಸ್ಯರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು/ವಿಳಾಸ	ಪ್ರವರ್ಗ
